**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)**

**ಸಂಚಿಕೆ 1; ಸಂಪುಟ 14 ; ಜನವರಿ –ಏಪ್ರಿಲ್ 2020 ; ಅಂಕಣ- ಭರತಕೌತುಕ**

# ನೃತ್ತರತ್ನಾವಳಿಯಲ್ಲಿರುವ ಲಾಸ್ಯಾಂಗಗಳು

(...ಮುಂದುವರಿದುದು)

**ಕಾಂಚನ ರೋಹಿಣಿ ಸುಬ್ಬರತ್ನಂ**
**(ಸಂಗೀತ ವಿದ್ವಾಂಸರು, ಬೆಂಗಳೂರು ನಿವಾಸಿ)**

ಬರೋಡಾ ಆವೃತ್ತಿಯ ನಾಟ್ಯಶಾಸ್ತ್ರದಲ್ಲಿ ಲಾಸ್ಯಕ್ಕೆ ಹನ್ನೆರಡು ಅಂಗಗಳು. ಗೇಯಪದ, ಸ್ಥಿತಪಾಠ್ಯ, ಆಸೀನ, ಪುಷ್ಪಗಂಢಿಕಾ, ಪ್ರಚ್ಛೇದಕ, ತ್ರಿಮೂಢ, ಸೈಂಧವ, ದ್ವಿಮೂಢ, ಉತ್ತಮೋತ್ತಮ, ಉಕ್ತಪ್ರತ್ಯುಕ್ತ, ಚಿತ್ರ, ಮತ್ತು ಭಾವಿಕ - ಎಂಬುದಾಗಿ (ಶ್ಲೋ. 116-138). ಇವು ಭಾಣವೆಂಬ ರೂಪಕದಲ್ಲಿ ಒಂದೇ ಪಾತ್ರವು ಶೃಂಗಾರರಸ ಸಂದರ್ಭಗಳನ್ನು ಅಭಿನಯಿಸುವುದಕ್ಕಾಗಿ ಏರ್ಪಟ್ಟವು. ಅವುಗಳಲ್ಲಿ ತ್ರಿಮೂಢವೆಂಬ ಲಾಸ್ಯಾಂಗದವರೆಗೂ ಲಕ್ಷಣಗಳನ್ನು  ಈ ಮೊದಲು ಹೇಳಿದೆ. ಮುಂದಿನದು ಸೈಂಧವ.  ಹತ್ತು ಲಾಸ್ಯಾಂಗಗಳೂ ಭಾಣವೆಂಬ ರೂಪಕದಲ್ಲಿ ಇರಬೇಕೆಂದು ಧನಂಜಯನು ಹೇಳಿದ್ದಾನೆ.

ಜಾಯಸೇನಾಪತಿಯ ನೃತ್ತರತ್ನಾವಳಿಯ ನರ್ತನವಿವೇಕವೆಂಬ ಈ ಅಧ್ಯಾಯವನ್ನರಿಯಲು ಭರತಮುನಿಯ ನಾಟ್ಯಶಾಸ್ತ್ರದ  ಸಂಧ್ಯಂಗವಿಕಲ್ಪವೆಂಬ ಅಧ್ಯಾಯದಲ್ಲಿರುವ ಹಾಗೂ ಧನಂಜಯನ ದಶರೂಪಕ ಮೊದಲನೆಯ ಅಧ್ಯಾಯದಲ್ಲಿರುವ ಪರಿಭಾಷೆಗಳನ್ನರಿಯುವುದು ಬಹಳ ಮುಖ್ಯವಾಗಿದೆ. ಜಾಯನನು ಲಾಸ್ಯಾಂಗಗಳನ್ನು ರೂಪಕಗಳಿಗಾಗಿಯೇ ಹೇಳಿರುವುದು ಸ್ಪಷ್ಟವಾಗಿದೆಯೆಂದು ಈಗಾಗಲೇ ಹೇಳಿದೆ. ಇತಿವೃತ್ತ, ಅವುಗಳ ಅವಸ್ಥೆಗಳು, ಇದಕ್ಕಿರುವ ಐದು ಸಂಧಿಗಳ ಅವಶ್ಯಕತೆ, ಅವುಗಳ ಐದು ಅರ್ಥಪ್ರಕೃತಿಗಳು, ಐದು ಸಂಧಿಗಳು, ಈ ಸಂಧಿಗಳ ಪ್ರಯೋಗ, ಈ ಸಂಧಿಗಳ ಅಂತರಗಳು, ಸಂಧಿಯ ಅಂಗಗಳು, ಅವುಗಳ ಲಕ್ಷಣಗಳು, ಅರ್ಥಪ್ರಕೃತಿಗಳನ್ನು ಹೊಂದಿಸುವ ವಿಧಾನಗಳು ಇವೆಲ್ಲದರ ಪರಿಭಾಷೆಗಳ ಅರ್ಥಗಳನ್ನು ಅರಿಯದೆ ಈ ಅಧ್ಯಾಯವನ್ನು ಅರ್ಥಮಾಡಿಕೊಳ್ಳಲು ಅಸಾಧ್ಯವೇ ಸರಿ. ಇವುಗಳು ರೂಪಕಗಳನ್ನು ಅಭಿನಯಿಸಲು ಇರುವ ಅವಶ್ಯಕತೆಗೆ ತಕ್ಕಂತೆಯೂ, ಆಯಾ ರೂಪಕಗಳ ಲಕ್ಷಣಗಳಿಗೆ ತಕ್ಕಂತೆ ಐದು ಅವಸ್ಥೆಗಳನ್ನೂ, ಅವುಗಳಿಂದ ಹೊರಡುವ ಐದು ಸಂಧಿಗಳನ್ನು, ಇಪ್ಪತ್ತೊಂದು ಸಂಧ್ಯಂತರಗಳನ್ನೂ, ಅರವತ್ತನಾಲ್ಕು ಅಂಗಗಳನ್ನೂ, ಮೂವತ್ತಾರು ಲಕ್ಷಣಗಳಿಂದ ಕೂಡಿದ ಗುಣ - ಅಲಂಕಾರಗಳನ್ನೂ ಮಹಾಪುರುಷರ ಮಹಾರಸವನ್ನು ಜನಿಸುವ ಉದಾತ್ತ ವಚನಗಳನ್ನು ಜನರಿಗೆ ಪ್ರಿಯವಾಗುವಂತೆ ಮೃದು ಶಬ್ದಗಳನ್ನು ಬಳಸಿ, ಸಂಧಿಗಳು ಸರಿಯಾಗಿ ಹೊಂದುವಂತೆ, ಕವಿಯು ನಾಟಕವನ್ನು ಬರೆಯಬೇಕೆಂದು ಭರತಮುನಿಯು ಹೇಳುತ್ತಾನೆ. ಜಾಯನನು ರಚಿಸಿರುವ ನೃತ್ತರತ್ನಾವಲಿಯಲ್ಲಿರುವ ಲಕ್ಷಣಗಳಿಂದ ಆ ಕಾಲದಲ್ಲಿದ್ದ ನಾಟಕದ ರಂಗಭೂಮಿಯ ಇತಿಹಾಸವು ತಿಳಿಯುತ್ತದೆ.

*ಸೈಂಧವವೆಂಬ ಲಾಸ್ಯಾಂಗ* —
------------------------------

copyright protected

ಪಾತ್ರಂ ವಂಚಿತ ಸಂಕೇತಂ ನಾಟ್ಯಂ ಆರ್ಯೇನ ನ ಚೋರ್ಜಿತಮ್ (ಪಾರ್ಯೇನಚೋಜ್ಝಿತಂ- ಎಂಬುದು ಹಸ್ತಪ್ರತಿಪಾಟ. ಇದು ಸಂಪಾದಕರು ತೋರಿಸಿದ ಪಾಠ)

ಭಾಷಾ ಚ ಸೈಂಧವೀಯತ್ರ ತ ಜಃಜ್ಞಸ್ತತ್ ಸಈವ್ಮ್ದವಂ ವಿಧುಃ ||೬೬||

ಸಂಕೇತಸ್ಥಾನಕ್ಕೆ, ಪ್ರಿಯನು ಬರದೆ ವಂಚಿತಳಾದ ಪಾತ್ರ, ಉತ್ತಮವಾದ ಪಾಠ್ಯವು ಇಲ್ಲದ ನಾಟ್ಯ- ಸೈಂಧವಿ ಭಾಷೆ - ಇವುಗಳನ್ನು ಸೈಂಧವವೆಂದು ತಿಳಿದವರು ಹೇಳುತ್ತಾರೆ.

ಸೈಂಧವಿಯು  ಸಿಂಧೂ ದೇಶದ ಭಾಷೆಯನ್ನು ಬಳಸುವ ಲಾಸ್ಯ ಪ್ರಕಾರ. ಇದಕ್ಕೆ ವಾದ್ಯವೂ ಸೈಂಧವವಾಗಿದ್ದು ವಾದ್ಯಸಂಗೀತವು ವಿತಸ್ತಾ ಮತ್ತು ಆಲಿಪ್ತ ಮಾರ್ಗದ್ದಾಗಿರಬೇಕು, ಪುಷ್ಕರವಾದ್ಯದಲ್ಲಿ  ಚಂಚತ್ಪುಟ ತಾಲವಿರಬೇಕು. ಅನೇಕ ಗುರು ಅಕ್ಷರಗಳಿದ್ದು ಸುಕುಮಾರ ಅಂಗಹಾರಗಳನ್ನು ಒಳಗೊಂಡಿರಬೇಕು. ಇದಕ್ಕೆ ಚತುರಸ್ರ ತಾಲ. ಇದರ ಪಾಠ್ಯ ಚಿಕ್ಕದಾಗಿರಬಾರದು. (ಪಾಠಾಂತರದಲ್ಲಿ ಪಾಠ್ಯವು ಸ್ವಲ್ಪವೂ ಇರಬಾರದು ಎಂದಿದೆ) ಹೆಚ್ಚಾಗಿ ರೇಚಕಗಳಿರುವುದಿಲ್ಲವೆಂಬ ಲಕ್ಷಣಗಳನ್ನು ಭರತಮುನಿಯು ನೀಡಿದ್ದಾನೆ.

*ಪರಿಭಾಷೆಗಳು* —

---

ಪುಷ್ಕರವಾದ್ಯದ ಸಂಗೀತದಲ್ಲಿ ಇರಬೇಕಾದ ನಾಲ್ಕು ಮಾರ್ಗಗಳು ಆಲಿಪ್ತ, ಅಡ್ಡಿತ, ಗೋಮುಖ ಮತ್ತು ವಿತಸ್ತಾ. ಇವು ಅವನದ್ಧ ವಾದ್ಯಗಳ ಪ್ರಹಾರಕ್ಕೆ ಸಂಬಂಧಿಸಿದವರು. ಇವಕ್ಕೆ ಇಂತಿತಹವೇ ಪಾಟಾಕ್ಷರಗಳು ಇರಬೇಕೆಂದು ಭರತಮುನಿಯು ಹೇಳುತ್ತಾನೆ.

*ಅಡ್ಡಿತ* — ಆಲಿಂಗ್ಯ ಮತ್ತು ಮೃದಂಗಗಳ ಪೆಟ್ಟುಗಳ  ಸಂಯೋಗ.

*ಆಲಿಪ್ತ* —ಊರ್ಧ್ವಕ ಮತ್ತು ವಾಮಕ ಪೆಟ್ಟುಗಳ ಸಂಯೋಗ.

*ವಿತಸ್ತ* — ಊರ್ಧ್ವಕ ಮತ್ತು ಆಂಕಿಕದ ದಕ್ಷಿಣದ ಪೆಟ್ಟು, ಇವೆರಡರ ಸಂಯೋಗ.

*ಗೋಮುಖ* — ಎಲ್ಲ ಪುಷ್ಕರಗಳ ಪೆಟ್ಟುಗಳನ್ನು ಹೆಚ್ಚಾದ ಆಲಿಂಗ್ಯದ ಪೆಟ್ಟುಗಳೊಡನೆ ಮಿಶ್ರ ಮಾಡುವುದು.

ನಾಟ್ಯಶಾಸ್ತ್ರವು ಈ ಎಲ್ಲಕ್ಕೂ ಪಾಟಾಕ್ಷರಗಳ ದೃಷ್ಟಾಂತಗಳನ್ನೂ, ಅವನ್ನು ಹೇಗೆ ಪುಷ್ಕರವಾದ್ಯಗಳಲ್ಲಿ ನುಡಿಸಬೇಕೆಂದೂ , ವಾದ್ಯಗಳಲ್ಲಿ ಈ ಮಾರ್ಗಗಳನ್ನು ನೃತ್ತದ ಸಂದರ್ಭದಲ್ಲಿ ಯಾವ ಯಾವ ರಸ, ಭಾವ, ಪಾತ್ರದ ಸತ್ತ್ವ, ಅಭಿನಯ, ಗತಿ ಪ್ರಚಾರ, ಇವುಗಳನ್ನು ಅನುಲಕ್ಷಿಸಿ ಸನ್ನಿವೇಶಗಳಿಗೂ ಅನುಗುಣವಾಗಿ ನುಡಿಸಬೇಕೆಂದೂ ಹೇಳಿದೆ. (ಅಧ್ಯಾಯ 33. ಪುಷ್ಕರವಾದ್ಯಗಳು. ಶ್ಲೋ. 44-54)

ಅಂಕ್ಯ/ಆಂಕಿಕವೆಂದರೆ ತೊಡೆಯ ಮೇಲಿಟ್ಟು ನುಡಿಸುವುದು, ಆಲಿಂಗ್ಯವೆಂದರೆ ತಬ್ಬಿ ಹಿಡಿದು ನುಡಿಸುವುದು, ಊರ್ಧ್ವಕವೆಂದರೆ ಶಬ್ದಿಸುವ ಚರ್ಮಮುಖವು ಮೇಲುಮುಖವಾಗಿರುವುದು —ಈ ಮೂರನ್ನೂ ತ್ರಿಪುಷ್ಕರಗಳೆಂದು ಭರತಮುನಿಯು ವರ್ಣಿಸಿದ್ದಾನೆ.  ಈ ಮೂರು ಪುಷ್ಕರವಾದ್ಯಗಳಿಗೆ ಸ್ವರದ ಕರ್ಕಶತೆ ಇರುವುದಿಲ್ಲ. ಮಿಕ್ಕವಾದ್ಯಗಳು ನೂರಾರು ಪ್ರಕಾರಗಳಿದ್ದರೂ ಅವುಗಳಲ್ಲಿ ಸ್ವರ-ಭೇದ ಇರುವುದಿಲ್ಲ. ಪ್ರಹಾರಗಳಾಗಲೀ ಅಕ್ಷರಗಳಾಗಲೀ ಸ್ಪಷ್ಟವಾಗಿ, ನಿಯತವಾಗಿ ಇರುವುದಿಲ್ಲ. ಈ ಮೂರು

Copyright protected

ಪುಷ್ಕರವಾದ್ಯಗಳಂತೆ ಹೊದಿಕೆ ಇದ್ದ ಎಲ್ಲ ವಾದ್ಯಗಳೂ ಅವನದ್ಧವಾದ್ಯಗಳೆಂದು ನಾಟ್ಯಶಾಸ್ತ್ರದಲ್ಲಿ ಹೇಳಿದೆ.

*ಚಂಚತ್ಪುಟ ( ಚಚ್ಚತ್ಪುಟ) ತಾಲ* — ಚಂಚತ್ಪುಟವು ಚತುರಶ್ರತಾಲ. ಮೊದಲು ಎರಡು ಗುರು, ತರುವಾಯ ಒಂದು ಕೊನೆಗೆ ಪ್ಲುತ. ಒಂದು ಕಲಾದ ಚಂಚತ್ಪುಟದಲ್ಲಿ ಅವುಗಳ ಗುರು ಲಘುಗಳ ಯೋಜನೆಯು ಹೀಗಿರುತ್ತದೆ : 1.ಸನ್ನಿಪಾತ, ಶಮ್ಯಾ, ತಾಲ, ಶಮ್ಯಾ 2. ಶಮ್ಯಾ, ತಾಲ, ಶಮ್ಯಾ, ತಾಲ 3. ತಾಲ, ಶಮ್ಯಾ, ತಾಲ, ಶಮ್ಯಾ . ಹೀಗೆ ಚಂಚತ್ಪುಟ ತಾಲದಲ್ಲಿ ಸನ್ನಿಪಾತಾದಿ, ಶಮ್ಯಾದಿ, ಮತ್ತು ತಾಲಾದಿ ಎಂದು ಮೂರು ಬೇಧಗಳಾಗುತ್ತವೆ. ಸನ್ನಿಪಾತಾದಿಯು ನಾಟ್ಯದಲ್ಲಿ ಚತುರಶ್ರವಾಗುವುದು. ಶಮ್ಯಾದಿಯು ಆಸಾರಿತಗಳಿಗೆ ಅನ್ವಯಿಸುತ್ತದೆ. ತಾಲಾದಿಯು ಪಾಣಿಕಾ ಮೊದಲಾದ ಗೀತಗಳಿಗೆ ಅನ್ವಯವಾಗುತ್ತದೆ. ಸನ್ನಿಪಾತ (ಪಾತ ಎಂದರೆ ಪೆಟ್ಟು), ಶಮ್ಯಾ, ತಾಲಗಳು ತಾಳವನ್ನು ಹಾಕುವ ವಿಧಾನಗಳು.

*ಸುಕುಮಾರ ಅಂಗಹಾರ* — ಅಂಗಹಾರವೆಂದರೆ ಕರಣಗಳ ಸರಮಾಲೆ. ಹಸ್ತಾಭಿನಯದ ಸಂದರ್ಭದಲ್ಲಿ ಹೇಳಿದ ನೃತ್ತಹಸ್ತ, ಪಾದಾಭಿನಯದ ಸಮಯದಲ್ಲಿ ಹೇಳಿದ ಚಾರೀ - ಇವುಗಳ ಸಂಯೋಗದಿಂದ ಕರಣಗಳಾಗುತ್ತವೆ. ಉದ್ಧತವಲ್ಲದ್ದು ಸುಕುಮಾರ. ಸುಕುಮಾರ ಪ್ರಯೋಗದಲ್ಲಿ ಶೃಂಗಾರ ರಸವೇ ಮೂಲವಾಗಿದ್ದು ಕಾಮಕ್ಕೆ ಸಂಬಂಧಿಸಿದಂತೆ ಗಂಡು - ಹೆಣ್ಣುಗಳ ಸಂಲಾಪ (ವ್ಯವಹಾರ) ಇರುತ್ತದೆ. ಅಂಗವಸ್ತುವಾಗಲೀ, ಸ್ಥಾಯೀ ಮುಂತಾದ ವರ್ಣವಾಗಲೀ ಸ್ಥಗಿತವಾದಾಗ ನೃತ್ತವನ್ನು ಪ್ರಯೋಗಿಸಬೇಕು. ಗಂಡು - ಹೆಣ್ಣುಗಳ ಮದನಕೇಳಿಯು ಗೀತದ ವಾಚ್ಯದಲ್ಲಿ ಬಂದಾಗ ನೃತ್ತವನ್ನು ಪ್ರಯೋಗಿಸಬೇಕು. ಕಾಂತನು ಹತ್ತಿರ ಬಂದಾಗ, ಋತುಕಾಲಗಳನ್ನು

ತೋರಿಸುವಾಗ ಗೀತದ ಅರ್ಥಕ್ಕೆ ಹೊಂದಿಸಿ ನೃತ್ತವನ್ನು ಪ್ರಯೋಗಿಸಬೇಕು. ಎಲ್ಲಿ ಖಂಡಿತಾ ನಾಯಿಕೆ, ವಿಪ್ರಲಬ್ಧೆ (ವಂಚಿತ), ಕಲಹಾಂತರಿಕೆ (ಜಗಳದಿಂದ ದೂರ ಸರಿದಾಕೆ) ಆಗಿರುವಳೋ ಅಲ್ಲಿ ನೃತ್ತವನ್ನು ಪ್ರಯೋಗಿಸಬಾರದು. ಸಖಿಯ ಕೂಡ ಮಾತನಾಡುವಾಗ, ಪ್ರಿಯನು ದೂರ(ದೇಶ) ದಲ್ಲಿದ್ದಾಗ, ಪ್ರಿಯನು ಹತ್ತಿರವಿಲ್ಲದಿದ್ದಾಗ ನೃತ್ತವನ್ನು ಪ್ರಯೋಗಿಸಬಾರದು. ಆದರೆ

ಯಾವುದೆ ಕಾರಣಕ್ಕಾಗಿ ಇಂತಹ ಸಂದರ್ಭಗಳಲ್ಲಿಯೂ ನಾಯಿಕೆಯ ಮನಸ್ಸು ಪ್ರಸನ್ನವಾಗಿದ್ದರೆ ಎಲ್ಲ ಅಂಗಗಳಲ್ಲಿಯೂ ನೃತ್ತವನ್ನು ಪ್ರಯೋಗಿಸಬೇಕು. ಯಾವ ಅಂಗವು ದೇವ (ಶಿವ) ನ ಸ್ತುತಿಗೆ ಸಂಬಂಧಿಸಿದೆಯೊ ಅಲ್ಲಿ ಮಾಹೇಶ್ವರ (ಶಿವನ ತಾಂಡವ)ದ ಅಂಗಹಾರಗಳನ್ನು, ಯಾವುದು ಗಂಡು - ಹೆಣ್ಣುಗಳ ಶೃಂಗಾರಕ್ಕೆ ಸಂಬಂಧಿಸಿದೆಯೊ ಅಲ್ಲಿ ದೇವಿ (ಪಾರ್ವತಿ)ಯ ಲಾಸ್ಯಕ್ಕೆ ಸಂಬಂಧಿಸಿದಂತೆ ಅಂಗಹಾರಗಳನ್ನು ಪ್ರಯೋಗಿಸಬೇಕೆಂದು ನಾಟ್ಯಶಾಸ್ತ್ರದಲ್ಲಿ ಹೇಳಿದೆ. (ಅ. 4.ಶ್ಲೋ.306-317)

*ಪಾಠ್ಯ* — ಪಾಠ್ಯವೆಂಬುದು ನಾಟಕದಲ್ಲಿಯ ಭಾಷಣ ಮಾತ್ರವಲ್ಲದೆ, ಅದನ್ನು ಉಚ್ಚರಿಸುವ (ಮಾತನಾಡುವ ಭಾಷೆಯ ) ಶೈಲಿ ಎಂದು ಅರ್ಥ. ಪಾಠ್ಯಗುಣಗಳು ಏಳುಸ್ವರಗಳು, ಅವುಗಳ ಮೂರು ಸ್ಥಾನಗಳು, ನಾಲ್ಕು ವರ್ಣಗಳು, ಎರಡು ಕಾಕು, ಆರು

Copyright protected

ಅಲಂಕಾರಗಳು ಮತ್ತು ಆರು ಅಂಗಗಳು. ನಾಟ್ಯಶಾಸ್ತ್ರದಲ್ಲಿ ಪಾಠ್ಯದ ಗುಣಗಳನ್ನು, ವಿಧಗಳನ್ನು, ನಾಟ್ಯದಲ್ಲಿ ಅವುಗಳನ್ನು ಅಳವಡಿಸಬೇಕಾದ ನಿಯಮಗಳನ್ನು ಶ್ಲೋ.39 ರಿಂದ 78ರವರೆಗೂ ವಿವರವಾಗಿ ಹೇಳಿದೆ.

ಸೈಂಧವಕಕ್ಕೆ ಸೈಂಧವಿ ಭಾಷೆಯನ್ನು ಕವಿಗಳು ತಮ್ಮ ನಾಟಕಗಳಲ್ಲಿ ರಸಸಾಕ್ಷಾತ್ಕಾರಕ್ಕಾಗಿ (ರಸಸಿದ್ಧಿಗಾಗಿ) ಉಪಯೋಗಿಸಿದ್ದಾರೆ. ಅಭಿನವಗುಪ್ತನು, ರಾಜಶೇಖರನು ತಾನು ಸಟ್ಟಕ ಕರ್ಪೂರಮಂಜರಿಯನ್ನು ಇದಕ್ಕಾಗಿಯೇ ಸೈಂಧವ ಭಾಷೆಯಲ್ಲಿಯೇ ರಚಿಸಿದ್ದೇನೆಂದು ಹೇಳುತ್ತಾನೆ. ಏಕೆಂದರೆ ಪ್ರಾಕೃತ ಭಾಷೆಗಳು ಶೃಂಗಾರರಸೋತ್ಪತ್ತಿಗೆ ಬಹಳವಾಗಿ ಸಹಾಯಕವಾಗುತ್ತವೆ. ಎಂದೇ ಭೆಜ್ಜಳನೂ ರಾಸಕಾಂಕವನ್ನು ರಾಧಾವಿಪ್ರಲಂಭಕ್ಕಾಗಿ ಹೆಚ್ಚಿನ ಸಂಭಾಷಣೆಗಳನ್ನು ಸೈಂಧವಭಾಷೆಯಲ್ಲಿಯೇ ರಚಿಸಿದ್ದಾನೆ. ಬರೋಡಾದಲ್ಲಿರುವ 132 ನೆಯ ನಾಟ್ಯಶಾಸ್ತ್ರದ ಆವೃತ್ತಿಯಲ್ಲಿ, ಸೈಂಧವ ನಾಟ್ಯವು ವಾಚಿಕವಿಲ್ಲದ ವಾದ್ಯಗಳಲ್ಲಿ, ಮುಖ್ಯವಾಗಿ ವೀಣಾವಾದ್ಯದಲ್ಲಿ ಕರಣ, ರೂಪ, (ರೂಪಕಾಲಪ್ತಿ?) ಗಳನ್ನು ನುಡಿಸಲ್ಪಡುವುದು ಎಂದು ಉಲ್ಲೇಖಿಸಿದೆ. ನಾನ್ಯದೇವನು ಈ ಲಾಸ್ಯಾಂಗವು ಅಸಾಧಾರಣವಾದ ಉಡುಪುಗಳನ್ನು ಹೊಂದಿದೆಯೆಂಬ ಲಕ್ಷಣವನ್ನು ಸೇರಿಸುತ್ತಾನೆ. ಭೋಜನು ನಾಟ್ಯಶಾಸ್ತ್ರದ 132 ನೆಯ ಆವೃತ್ತಿಯಲ್ಲಿರುವ ಲಕ್ಷಣಗಳನ್ನೆ ನೀಡಿ ರತ್ನಾವಳಿ ನಾಟಕದ ಎರಡನೆಯ ಅಂಕದ ವಿದೂಷಕನ ಪಾತ್ರವು ನಾಟ್ಯವನ್ನು ಮಾಡುವಾಗ ತನ್ನ ಕೈಯ್ಯನ್ನು ಅಗಲಿಸಿದ ಸಂದರ್ಭದಲ್ಲಿ ಕೈಯಲ್ಲಿದ್ದ ಚಿತ್ರಪಟಗಳು ಕೆಳಗೆ ಬಿದ್ದು ತನ್ನ ವಿಷಣ್ಣತೆಗೆ ಕಾರಣವಾದ್ದರಿಂದ ರಾಜನು ಬೆರಳುಗಳನ್ನೂ ತೋರಿಸುತ್ತ ವಿದೂಷಕನನ್ನು ಬಯ್ಯುತ್ತಾನೆ. ಅಭಿನವಗುಪ್ತನು 'ಕರುಣ' ಶಬ್ದವನ್ನು ಕುರಿತು ಇದು ಪ್ರಕ್ಷಿಪ್ತವೆಂದೂ ಇದು 'ಕರಣ' ವೆಂದೂ ಹೇಳುತ್ತಾನಲ್ಲದೆ, ಯಾರು ಈ ಲಾಸ್ಯಾಂಗಕ್ಕೆ ವಾಚಿಕವಿಲ್ಲವೆಂದು ಹೇಳುತ್ತಾರೆಯೊ ಹಾಗೂ ರತ್ನಾವಳಿ ನಾಟಕದ ಎರಡನೆಯ ಅಂಕದಲ್ಲಿರುವ ವಿದೂಷಕನ ಕೈ ಅಗಲಿಸಿ ನಾಟ್ಯವನ್ನಾಡಿದ ಉದಾಹರಣೆ ಮುಂತಾದವನ್ನು ನೀಡುತ್ತಾರೊ ಅಂತಹವರು ಭರತಮುನಿಯು ನೀಡಿದ ಲಕ್ಷಣಗಳನ್ನು ಉಪೇಕ್ಷಿಸುತ್ತಿದ್ದಾರೆನ್ನುತ್ತಾನೆ. ಶಾರದಾತನಯನು ಸೈಂಧವಕವು ಒಂದು ನಿರ್ದಿಷ್ಟ ಪ್ರಾಂತೀಯ ಭಾಷೆಯಲ್ಲಿ ರಚಿತವಾಗುವ ಲಾಸ್ಯವೆಂದೂ, ಇದರಲ್ಲಿ ಸೊಂಟದಲ್ಲಿರುವ ಸರಪಳಿ ಹಾಗೂ ಕಂಕಣಗಳ ಕಂಪನಗಳು, ಕುಲುಕಾಟ, ಅಲುಗಾಟಗಳು ಇರುತ್ತವೆಂದು ಹೇಳುತ್ತಾನೆ. ಸಾಗರನಂದಿಯು ಈ ಲಾಸ್ಯಾಂಗವು ಸಿಂಧು ಪ್ರಾಂತ್ಯದಲ್ಲಿ ಪ್ರಚಲಿತವಿದ್ದ ಹಾಡುಗಳನ್ನೂ, ವಾದ್ಯ ಸಂಗೀತವನ್ನೂ ಹೊಂದಿದೆಯೆಂದೂ, ಶಂಖಗಳಿರುವ ಕಂಕಣಗಳು ಮುಂತಾದವನ್ನೂ ಹೊಂದಿದೆಯೆಂದೂ ಹೇಳುತ್ತಾನೆ. ವಿಶ್ವನಾಥನು, ಈ ಲಾಸ್ಯಾಂಗದಲ್ಲಿ ಕೆಲವೊಂದು ಪಾತ್ರವು ತಮ್ಮ ಸಂಪ್ರದಾಯವನ್ನು ಮರೆತು ಪ್ರಾಕೃತದಲ್ಲಿ ಸಂಭಾಷಿಸುತ್ತದೆಂದೂ, ಬಹು ಚಾತುರ್ಯದಿಂದ ವೀಣಾವಾದನದಲ್ಲಿ ಕರಣಗಳನ್ನು ಪ್ರಯೋಗ ಮಾಡುತ್ತ ತನ್ನ ಪ್ರತಿಭಾ ಸಾಮರ್ಥ್ಯವನ್ನು ತೋರುತ್ತವೆಂದೂ ಹೇಳುತ್ತಾನೆ. ರಾಣಾಕುಂಭನು ಜಾಯನನು ಲಕ್ಷಣಗಳನ್ನೆ ಹೇಳುತ್ತಾನೆ. ಶುಭಂಕರನು ಈ ಲಾಸ್ಯಾಂಗವು ಪ್ರಾದೇಶಿಕ ಭಾಷೆಯ ಹಾಡುಗಳನ್ನು ಉಳ್ಳದ್ದೆಂದೂ ಗತಿ - ಲಯಗಳನ್ನು ಹೊಂದಿ ಶಂಖವಾದ್ಯವನ್ನೂ ಹೊಂದಿದೆಯೆಂದು, ಪ್ರಾಂತ್ಯವು ಸಿಂಧೂ ಎಂದೂ ನಿರೂಪಿಸುತ್ತಾನೆ.

Copyright Protected

*ರೇಚಕ* — 1..ರೇಚಕವೆಂಬುದು ಸ್ವರಾಲಂಕಾರದ ಸಂಚಾರೀ ವರ್ಣಗಳಲ್ಲೊಂದು. ಮೊದಲನೆಯದು, ಎರಡನೆಯದು, ಮೂರನೆಯದು ಮತ್ತು ಎರಡನೆಯದು, ಪುನಃ ಕ್ರಮವಾಗಿ ಮೊದಲನೆಯ ಮೂರು ಸ್ವರಗಳು — ಇವುಗಳನ್ನು ಹಾಡಿದ್ದು ಮೊದಲನೆಯ ಕಲೆಯಾದರೆ ಹೀಗೆಯೇ ಆರು ಕಲೆಗಳನ್ನು ನಡೆಸಿದರೆ ಇದು ರೇಚಕ/ರೇಚಿತವೆಂದು ಸ್ಮೃತವಾಗಿದೆ. ಹೇಗೆಂದರೆ ಸರಿಗರಿಸರಿಗ ರಿಗಮಗರಿಗಮ ಗಮಪಮಗಮಪ ಮಪಧಪಮಪಧ ಪಧನಿಧಪಧನಿ ಧನಿಸನಿಧನಿಸ.

2..ಶಿವನು ತನ್ನ ಗಣವಾದ ತಂಡುವಿಗೆ ಉಪದೇಶಿಸಿದ ಅಂಗಹಾರಗಳನ್ನು ಆತನ ಆಜ್ಞೆಯ ಮೇರೆಗೆ ತಂಡುವು ಭರತಮುನಿಗೆ ಉಪದೇಶಿಸಿದ ಅಂಗಹಾರಗಳೂ ತದಂಗಗಳಾದ ಕರಣ, ಚಾರೀ, ರೇಚಕ, ವರ್ತನೀ, ಮಂಡಲ, ಭ್ರಮರ, ಸ್ಥಾನಕ, ಇತ್ಯಾದಿಗಳು ತಾಂಡವವೆನ್ನಿಸಿದವು. ರೇಚಕವು ಕರಣಗಳ ಅಂಗವಾಗಿ ಬಳಸುವಂತಹದು. ಅದು ನಾಲ್ಕು ಬಗೆ. 1. ಪಾದರೇಚಕ - 2. ಕರರೇಚಕ 3. ಕಂಠರೇಚಕ 4.ಕಟಿರೇಚಕ. ರೇಚಿತವೆಂದರೆ ಬೇರೆಯಾಗುವುದು, ತಿರುಗುವುದು, ಎತ್ತರಿಸುವುದು, ಪಕ್ಷದಿಂದ ಪಕ್ಕಕ್ಕೆ ಹೋಗುವುದು, ತತ್ತರಿಸುವ ಹೆಜ್ಜೆಗಳಿಂದ ನಡೆಯುವುದು ಮುಂತಾಗಿ ಅರ್ಥಗಳಿವೆ. ಕೊನೆಯದು ಇಲ್ಲವೆ ಪಾದದ ಅಂತಹುದೇ ರೀತಿಯ ಬೇರೆ ಬೇರೆ ಚಲನೆಗಳು ಪಾದರೇಚಕ. ಕೈಯ್ಯನ್ನು ಸುತ್ತಲೂ ತಿರುಗಿಸುವುದು, ಚೆಲ್ಲುವುದು, ದುಂಡಗೆ ತಿರುಗಿಸುವುದು, ಮೆಲ್ಲನೆ ಮುಂದೆ ಮುಂದೆ ಸರಿಸುವುದು ಕರ /ಹಸ್ತರೇಚಕ, ಕತ್ತನ್ನು ಎತ್ತಿಹಿಡಿಯುವುದು, ಕೆಳಗೆ ಬಾಗಿರುವುದು, ಪಕ್ಕಕ್ಕೆ ಬಾಗಿಸುವುದು, ಅತ್ತಿತ್ತ ಹೊಯ್ದಾಡುವುದು ಕಂಠರೇಚಕ. ಮೇಲ್ಮೈಯನ್ನು ಸೆಟೆಯಿಸುವುದು, ಸೊಂಟವನ್ನು ತಿರುಗಿಸುವುದು ಮುಂತಾದವು ಕಟಿರೇಚಕ. (ನಾ. ಶಾ. ಅ. 4 ಶ್ಲೋ. 247 - 253)

*ಸೈಂಧವಿ* ಎಂಬ ರಾಗವೂ ಒಂದಿದೆ. ಮತಂಗನು (5-7ನೆಯ ಶತಮಾನ) ತನ್ನ ಬೃಹದ್ದೇಶಿಯ ನಾಲ್ಕನೆಯ ಭಾಷಾ ಅಧ್ಯಾಯದಲ್ಲಿ ಈ ರಾಗವನ್ನು ಭಾಷಾರಾಗದಲ್ಲಿ ಎಂಟನೆಯ ರಾಗವಾಗಿ ಹೇಳಿದ್ದಾನೆ. ಇದು ಮಾಲವಕೈಶಿಕವೆಂಬ ಗ್ರಾಮರಾಗದಲ್ಲಿ ಭಾಷಾರಾಗದಲ್ಲಿ ಸೈಂಧವಿಯು ಐದನೆಯದಾಗಿಯೂ ಭಿನ್ನಷಡ್ಜಾ ಎಂಬ ಗ್ರಾಮರಾಗದಲ್ಲಿ ಏಳನೆಯ ರಾಗವಾಗಿಯೂ, ಟಕ್ಕಾ ರಾಗದಲ್ಲಿ ಭಾಷಾ ರಾಗವಾಗಿಯೂ ಹೇಳಿದ್ದಾನೆ. ಟಕ್ಕಾ ರಾಗದಲ್ಲಿ ಹುಟ್ಟಿರುವ ಸೈಂಧವಿರಾಗವು ಸೈಂಧವ ದೇಶದ ಹೆಸರಿನದ್ದಾಗಿದ್ದು ದೇಶಜಾ ವರ್ಗದ ಭಾಷಾರಾಗವಾಗಿದೆ. ಮಧ್ಯಮವನ್ನು ಅಂಶವನ್ನಾಗಿಯೂ ಷಡ್ಜವನ್ನು ನ್ಯಾಸವಾಗಿಯೂ ಧೈವತವನ್ನು ಬಹುಲವಾಗಿ ಉಜ್ವಲವಾಗಿ ಪಡೆದಿದ್ದು ಎಲ್ಲ ಸ್ವರಗಳಿಂದಲೂ ಸಂಪೂರ್ಣವಾಗಿದೆ. ಷಡ್ಜ - ಧೈವತಗಳಲ್ಲಿಯೂ, ಗಾಂಧಾರ - ಮಧ್ಯಮಗಳಲ್ಲಿಯೂ ಪರಸ್ಪರ ಸಂಗವು ಹೆಚ್ಚಾಗಿ ಕಂಡುಬರುತ್ತದ ಎಂದು ಹೇಳಿ ರಾಗ ಸಂಚಾರಕ್ಕಾಗಿ ಸ್ವರಗಳ ವರ್ಣಗಳನ್ನು ಮತಂಗಮುನಿಯು ನೀಡಿದ್ದಾನೆ. ಮಾಲವಕೈಶಿಕವೆಂಬ ಜನ್ಯಭಾಷಾರಾಗವಾದ ಸೈಂಧವಿರಾಗವನ್ನು ಷಡ್ಜವು ಗ್ರಹ ಮತ್ತು ನ್ಯಾಸವಾಗುವಂತೆ, ಷಡ್ಜಮಧ್ಯಮಗಳು ಬಹುಲವಾಗಿರುವಂತೆ, ನಿಷಾದ - ರಿಷಭಗಳಲ್ಲಿ ಬಾಹುಳ್ಯವಿರುವಂತೆ, ಸಂಗತಿ ಇರುವಂತೆ ರಾಗವನ್ನಲಂಕರಿಸಬೇಕು, ಇದು ಸಿಂಧುದೇಶದಲ್ಲಿ ಹುಟ್ಟಿದ ದೇಶಜಾ ಎಂದು ಹೇಳಿ ಮತಂಗಮುನಿಯು ಉದಾಹರಣೆಗಾಗಿ ರಾಗದ ಸ್ವರಸಂಚಾರಗಳನ್ನು ನೀಡಿದ್ದಾನೆ. ಪಂಚಮಗ್ರಾಮದ ಭಾಷಾರಾಗವಾದ ಸೈಂಧವಿಯು ಪಂಚಮವನ್ನು ಅಂಶವನ್ನಾಗಿಯೂ ಅದನ್ನೇ ನ್ಯಾಸವನ್ನಾಗಿಯೂ ಪಡೆದಿದ್ದು

copyright protected

ಪಂಚಮಸ್ವರವು ವಿಪುಲವಾಗಿ ಉಜ್ವಲವಾಗಿ ಹೊಂದಿದೆಯೆಂದೂ ಇದು ವಿಭಾಷಾ ರಾಗವೆಂದೂ ಇದರ ಷಡ್ಜಪಂಚಮಗಳಲ್ಲಿ ಪರಸ್ಪರ ಸಂವಾದ ಸಂಚಾರವು ಮತ್ತೆ ಮತ್ತೆ ಕಂಡುಬರುತ್ತದೆಂದೂ ಸಿಂಧೂ ದೇಶದಲ್ಲಿ ಹುಟ್ಟಿರುವ ದೇಶಜಾ ರಾಗವೆಂದೂ ಮತಂಗಮುನಿಯು ವರ್ಣಿಸಿ ಉದಾಹರಣೆಗೆ ರಾಗ ಸಂಚಾರಗಳನ್ನಿತ್ತಿದ್ದಾನೆ. ಭಿನ್ನಷಡ್ಜಾದಲ್ಲಿ ಜನ್ಯವಾದ ಸೈಂಧವೀ ಭಾಷಾರಾಗವು ಮಧ್ಯಮವನ್ನು ಅಂಶವನ್ನಾಗಿಯೂ ಧೈವತವನ್ನು ನ್ಯಾಸವಾಗಿಯೂ ಪಂಚಮ ರಿಷಭಗಳನ್ನು ದುರ್ಬಲವಾಗಿಯೂ ಪಡೆದಿದೆ, ಷಡ್ಜ ಮಧ್ಯಮಗಳಲ್ಲಿಯೂ, ಹಾಗೆಯೇ ಷಡ್ಜ ಗಾಂಧಾರಗಳಲ್ಲಿಯೂ ಪರಸ್ಪರವಾಗಿ ಸಂವಾದ ಸಂಚಾರವಿದೆ, ಈ ಸೈಂಧವಿಯೂ ಸಿಂಧೂ ದೇಶಜಾ ರಾಗವಾಗಿದ್ದು ಅದೇ ಹೆಸರನ್ನು ಪಡೆದಿದೆ ಎಂದು ಮತಂಗಮುನಿಯು ಹೇಳಿ ರಾಗ ಸಂಚಾರಗಳನ್ನಿತ್ತಿದ್ದಾನೆ. ಮತಂಗನು ಸೈಂಧವೀರಾಗದಲ್ಲಿ ಗಮಕವು ಘನವಾಗಿಪ್ರಯುಕ್ತವೆಂದು ಹೇಳಿದ್ದಾನೆ.

ಉತ್ತರಭಾರತದಲ್ಲಿ - ಬಹುಶಃ ರಾಜಸ್ತಾನದಲ್ಲಿ ಸೋಮನಾಥನು ಹಿಂದೂಸ್ಥಾನೀ ಸಂಗೀತದ ರಾಗಲಕ್ಷಣಗಳನ್ನು ನಿರೂಪಿಸಲೆಂದು ರಾಗವಿಬೋಧವನ್ನು (ಕ್ರಿ. ಶ. 1602)ರಚಿಸಿದ್ದಾನೆ. ಅದರಲ್ಲಿ

ಪರ್ಶಿಯನ್ ಮಕಾಂ/ಪರದಗಳಿಗೂ ಈಗ ಹಿಂದೂಸ್ಥಾನೀಸಂಗೀತದವೆಂದು ಕರೆಯಲ್ಪಡುವ ರಾಗಗಳಿಗೂ ಸಮೀಕರಣವನ್ನು ಏರ್ಪಡಿಸಿದ್ದಾನೆ. ಅದರಲ್ಲಿ ಸೈಂಧವೀ ರಾಗಕ್ಕೆ ಹಿಜೇಜ್ಸ್ ರಾಗವನ್ನು ಸಮೀಕರಿಸಿದ್ದಾನೆ. ಪಂಡರೀಕವಿಠ್ಠಲನು (16ನೆಯ ಶತಮಾನ) ತನ್ನ ರಾಗಮಂಜರಿಯ ಕೊನೆಯಲ್ಲಿ ಈ ಹಿಜೇಜ್ಸ್ ಮಕಾಂಗೆ ಆಸಾವರೀ ರಾಗವನ್ನು ಸಮೀಕರಿಸಿದ್ದಾನೆ! ಅಲ್ ದೀನ್ ಅಬ್ದ್ ಅಲ್ ಮೂಮಿನ್ ನು ಸುಮಾರು 1252ರಲ್ಲಿ ತನ್ನ ಕಿತಾಬ್ ಅಲ್ ಅದ್ವಾರ್ ಹಾಗೂ ರಿಸಾಲತ್ ಅಲ್ ಷರಫಿಯಾ ಫಿ'ಲ್ ನಿಸಬ್ ಅಲ್ ತ ಲಫೀಯಾ ಗಳಲ್ಲಿ ಹಿಜೇಜ್ಸ್ /ಹಿಜಾಜ್ಸ್ ಮಕಾಂಗೆ ಇರುವ ಸ್ವರಸ್ಥಾನಗಳನ್ನು ಹೀಗೆ ನೀಡಿದ್ದಾನೆ. — ಸ, ರಿ2, ಗ2, ಮ1, ಪ, ಧ2, ನಿ2, ಸ. ಇದು ವೆಂಕಟಮಖಿಯು 72 ಮೇಳಕರ್ತರಾಗಪದ್ಧತಿಯಂತೆ 22ನೇ ಮೇಳರಾಗವಾಗಿರುವ ಖರಹರಪ್ರಿಯರಾಗಕ್ಕೆ ಪರಸ್ಪರವಾಗಿದ್ದರೂ ಪರ್ಶಿಯನ್ ಸಂಗೀತಪದ್ಧತಿಯಲ್ಲಿನ ಸ್ವರಸ್ಥಾನಗಳಿಗೂ ಭಾರತೀಯ ಸಂಗೀತ ಸ್ವರಸ್ಥಾನಗಳಿಗೂ ಸೆಂಟುಗಳಲ್ಲಿ ವ್ಯತ್ಯಾಸವಿದೆ. ಪಂಡರೀಕವಿಠ್ಠಲನು ತನ್ನ ಸದ್ರಾಗಚಂದ್ರೋದಯದಲ್ಲಿ ಸೈಂಧವೀ ರಾಗವನ್ನು ರಿ-ಧಗಳು ಚತುಃಶ್ರುತಿಕಗಳಾಗಿರುವ, ಸಾಧಾರಣ ಗಾಂಧಾರ-ಕೈಶಿಕಿನಿಷಾದವಿರುವ ಸ-ಮ-ಪಗಳು ಶುದ್ಧವಿರುವ ಶ್ರೀರಾಗಮೇಲದಲ್ಲಿ ಜನ್ಯವೆಂದು ಹೇಳಿದ್ದಾನೆ. ರಾಗಮಾಲಾ ಗ್ರಂಥದಲ್ಲಿ ಸೈಂಧವಿಯು ಶುದ್ಧಭೈರವರಾಗದ ಪತ್ನಿಯೆಂದು ಹೇಳಿ ಸೈಂಧವೀ ರಾಗಿಣಿಯು ಭೈರವೀಮೇಲದಲ್ಲಿ ಹುಟ್ಟಿದೆ, ಎಲ್ಲ ಸ್ವರಗಳಿಂದಲೂ ಕೂಡಿದೆ. ಸ-ತ್ರಯ, ಚಂದ್ರನಂತೆ ಮುಖವುಳ್ಳವಳು, ಕೃಶಾಂಗಿ, ತಾವರೆಗಣ್ಣಿನವಳು, ವಿಶಾಲವಾದ ಜಘನವಿದೆ, ಮದ್ದಾನೆಯಂತೆ ನಡೆಯುತ್ತಾಳೆ(ಅಥವಾ ಮದ್ದಾನೆಯು ವಾಹನವಾಗಿದೆ), ಮೆಲ್ಲಮೆಲ್ಲನೆ ಮಾತನಾಡುತ್ತಾಳೆ, ಕೆಂಪುಬಟ್ಟೆಯನ್ನುಟ್ಟಿದ್ದಾಳೆ, ಯುದ್ಧದಲ್ಲಿ ಸೇನಾನಾಯಕರ ವಿಮಲ ಯಶಸ್ಸನ್ನು ಕೋರಿ ಹಾಡುತ್ತಾಳೆ, ಬಹು ಗಮಕದಲ್ಲಿ ಕೂಡಿದ್ದು ಸದಾಕಾಲದಲ್ಲಿಯೂ ಗಾನಾರ್ಹವಾಗಿದೆ ಎಂದು ಹೇಳಿದ್ದಾನೆ. ಸೈಂಧವೀರಾಗಕ್ಕೆ ಸಿಂಧುರಾ ಎಂಬ ಹೆಸರೂ ಇದೆ. ಪಂಡರೀಕವಿಠ್ಠಲನು ಹೇಳಿದ ರಾಗದೇವತೆಯ ಕಲ್ಪನೆಯು ಸೈಂಧವ ಲಾಸ್ಯಾಂಗಕ್ಕೆ ಪೂರಕವಾಗಿದೆಯೆಂಬುದನ್ನು ಗಮನಿಸಬಹುದು.

Copyright Protected

**ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)**

**ಸಂಚಿಕೆ 1; ಸಂಪುಟ 14 ; ಜನವರಿ –ಏಪ್ರಿಲ್ 2020 ; ಅಂಕಣ- ಭರತಕೌತುಕ**

(ನಾಟ್ಯದ ಪರಿಭಾಷೆಯನ್ನು ಕಳೆದ ಬಾರಿ ನೀಡಿದೆ)

---

ದ್ವಿಮೂಢಕ ಲಾಸ್ಯಾಂಗ —

ದ್ವಿಮೂಢ/ದೈಮೂಢ ಲಾಸ್ಯಾಂಗ —
--------------------------------------

ಮುಖಪ್ರತಿಮುಖೋಪತಂ ಚತುರ್ಶ್ರಪದಕ್ರಮಮ್
ಶ್ಲಿಷ್ಟ ಭಾವರಸಂ ಯತ್ತತ್ ವೈಚಿತ್ರ್ಯಾರ್ಥಂ ದ್ವಿಮೂಢಕಮ್ ||೬೭||

ಮುಖ ಪ್ರತಿಮುಖಗಳನ್ನುಳ್ಳದ್ದು, ಚತುರಶ್ರವಾದ ನಡಿಗೆ ಹೊಂದಿರುವಂಥದ್ದು, ಭಾವರಸಗಳು ಶ್ಲಿಷ್ಟವಾಗಿ ಇರುವುದು, ವೈಚಿತ್ರ್ಯಪೂರ್ಣ ಅರ್ಥಗಳನ್ನುಳ್ಳದ್ದು ( ವೈಚಿತ್ರ್ಯ ಪ್ರಯೋಜನವಾಗುಳ್ಳದ್ದು ) ದ್ವಿಮೂಢಕ.

ಭರತಮುನಿಯು ದ್ವಿಮೂಢಕಕ್ಕೆ ಹನ್ನೆರಡು ಸನ್ನಿಪಾತಗಳ ಚಾಚಪುಟ ತಾಲದ ಮುಖ - ಪ್ರತಿಮುಖಗಳಿರುತ್ತವೆ. ವಸ್ತುವಿನಲ್ಲಿ ಒಂದಕ್ಕಿಂತ ಹೆಚ್ಚು ಘಟನೆಗಳೂ ಹೆಚ್ಚು ಅರ್ಥಗಳೂ ಇರಬೇಕು. ಅದರಲ್ಲಿ ಪುರುಷನ ಭಾವನೆಗಳ ಸಂಬಂಧವಿರಬೇಕು. ಒಂದು ಅಂಗವಾಗಲಿ ಇಲ್ಲವೆ ಶೀರ್ಷಿಕವಾಗಲಿ ಇರಬೇಕೆಂಬ ಲಕ್ಷಣವನ್ನೀಯುತ್ತಾನೆ (ಶ್ಲೋ. ಅ. 31.471-473). ದ್ವಿಮೂಢಕವು ಮುಖ್ಯವಾಗಿ ಮುಖ - ಪ್ರತಿಮುಖಗಳೆಂಬ ತಾಳಾಂಗಗಳ ಆಕರ್ಷಕ ಅಭೀಘಾತಗಳನ್ನು ಹೊಂದಿದ್ದು ಪದಗತಿಯು ಚತುರಸ್ರದಲ್ಲಿ ಇರುತ್ತದೆಂದು ಅಭಿನವಗುಪ್ತನು ಇದನ್ನು ಒಂದೋ ನಾಯಕ - ನಾಯಕಿಯರು ಅಥವಾ ಇಬ್ಬರು ನಾಯಕಿಯರು ನಾಲ್ಕು ಪದಗಳಿರುವ ಪ್ರಬಂಧಕ್ಕೆ ಸರಿಯಾಗಿ ತಾಳಕ್ಕೆ ಅನುರೂಪವಾಗಿ ನಾಲ್ಕು ಬಾರಿ ನರ್ತಿಸುತ್ತಾರೆಂದು ವಿವರಿಸುತ್ತಾನೆ. ಮುಖ - ಪ್ರತಿಮುಖಗಳು ನಾಟ್ಯಶಾಸ್ತ್ರದಲ್ಲಿ ಹೇಳಿದ ಸಂಧಿಗಳೆಂದು ಕೆಲವು ವಿದ್ವಾಂಸರು ಹೇಳಿದ್ದನ್ನು ಅಭಿನವಗುಪ್ತನು ಅಲ್ಲಗಳೆಯುತ್ತಾನೆ. ಧನಂಜಯ ಹಾಗೂ ವಿಶ್ವನಾಥರು ಈ ಲಾಸ್ಯಾಂಗವನ್ನು ದ್ವಿಗೂಢಕವೆಂದು ಕರೆದಿದ್ದಾರೆ. ಭೋಜನ ಅಭಿಪ್ರಾಯದಂತೆ ಮುಖ - ಪ್ರತಿಮುಖಗಳು ಪ್ರಮುಖವಾಗಿ ಕ್ರಮಬದ್ಧವಾಗಿ ಪ್ರಯೋಗಿಸಲ್ಪಡುವ ರಸ - ಭಾವಗಳು. ಇದಕ್ಕೆ ಆತನು ರತ್ನಾವಳಿ ನಾಟಕದ ಎರಡನೆಯ ಅಂಕದಲ್ಲಿ, ಸುಸಂಗತನ ಆಗಮನದವರೆಗೂ ಸಾಗರಿಕಳ ಚಿತ್ರಪಟವನ್ನು ನೋಡುತ್ತಿರುವುದನ್ನು ಉದಾಹರಣೆಯನ್ನಾಗಿ ನೀಡುತ್ತಾನೆ. ಇಲ್ಲಿ ಸಂಧಿಯಲ್ಲೊಂದಾದ ಮುಖವು ಇಲ್ಲಿ ಬೀಜವು ಇತಿ - ವೃತ್ತವನ್ನು ಅನುಸರಿಸಿದರೆ, ಸುಸಂಗತನ ಆಗಮನದ ನಂತರ ರಾಜನು ಸಂಶಯಪರನಾಗುತ್ತಾನೆಂಬಲ್ಲಿ ಪ್ರೇಮಾಂಕುರವಾಗುವ ಅಥವಾ ಮುರಿಯುವ ಇನ್ನೊಂದು ಕಥಾವಸ್ತುವೊಂದು ಬೀಜವೊಡೆದು ಪ್ರತಿಮುಖವೆಂಬ ಸಂಧಿಯುಂಟಾಗುತ್ತದೆ. ಶಾರದಾತನಯನು ಈ ಲಾಸ್ಯದಲ್ಲಿ ಆಕರ್ಷಕವಾದ ಚಾರೀಗಳೂ ಅಭಿನಯವೂ,

Copyright Protected

ಭಾವಗಳೂ ಇರುತ್ತವೆನ್ನುತ್ತಾನೆ. ಸಾಗರನಂದಿಯು ಈ ಲಾಸ್ಯಾಂಗವನ್ನು ದ್ವಿಮುಕ್ತಕವೆಂದು ಕರೆದು ಇದು ಮುಖ - ಪ್ರತಿಮುಖಗಳನ್ನು ಹೊಂದಿದ್ದು ಆಕರ್ಷಕ ಚಾರೀಗಳಿಂದಲೂ ಭಾವಗಳಿಂದಲೂ ಶೋಭೆಯನ್ನು ಪಡೆದಿದೆಯೆಂದೂ ಹೇಳಿ ಕಲಾವತಿಯೆಂಬ ನಾಟಕದ ಮೂರನೆಯ ಅಂಕವನ್ನು ಉದಾಹರಣೆಯಾಗಿ ನೀಡುತ್ತಾನೆ. ಶುಭಂಕರನು ಇದನ್ನು ವಿಮೂಢಕವೆಂದು ಕರೆದು ಇದು ವಿನೋದಪರವಾದ ಹಾಡೆಂದು ಹೇಳುತ್ತಾನೆ.

ಪರಿಭಾಷೆಗಳು ——

1..ಚತುರಶ್ರ — ಸಂಹತ, ಸಮಪಾದ, ವೈಶಾಖ, ವೈಷ್ಣವ, ಚತುರಸ್ರ, ಆಲೀಢ, ಪ್ರತ್ಯಾಲೀಢ ಎಂಬ ಕ್ರಮಗಳು ನೃತ್ತಶಾಸ್ತ್ರದಲ್ಲಿ ನಿರೂಪಿತವಾದ ನಿಲುವುಗಳು. ಇವುಗಳನ್ನು ಸಂಗೀತರತ್ನಾಕರದ ನರ್ತನಾಧ್ಯಾಯದಲ್ಲಿ ವರ್ಣಿಸಿದೆ. 1..ಸಂಹತ ಸ್ಥಾನದಲ್ಲಿ ದೇಹದ ನಿಲುವು ಸ್ವಾಭಾವಿಕವಾಗಿರುತ್ತದೆ, ಎರಡೂ ಕಾಲುಗಳ ಹೆಬ್ಬೆರಳುಗಳೂ ಹರಡುಗಳೂ ಒಂದನ್ನೊಂದು ತಗಲುತ್ತಿರುರುತ್ತವೆ. ಇದೊಂದು ದೇಶೀ ಸ್ಥಾನಕ. 2..ಸಮಪಾದವೂ ದೇಶೀ ನಿಲುವು. ಇದರಲ್ಲಿಯೂ ದೇಹದ ನಿಲುವು ಸ್ವಾಭಾವಿಕ. ಪಾದಗಳ ನೇರವಾಗಿದ್ದು ಚೋಟು ಅಥವಾ ಹನ್ನೆರಡಂಗುಲದ ದೂರದಲ್ಲಿರುತ್ತವೆ. 3..ವೈಶಾಖದಲ್ಲಿ ಎರಡು ಪಾದಗಳ ಮೂರೂವರೆ ಚೋಟು ದೂರದಲ್ಲಿ ಓರೆಯಾಗಿದ್ದು ತೊಡೆಗಳ ಹಾಗೆಯೇ ಅದೇ ದೂರದಲ್ಲಿರುತ್ತವೆ. ಇದಕ್ಕೆ ನಂದಿಕೇಶ್ವರನು ತನ್ನ ಭರತಾರ್ಣವದಲ್ಲಿ ಎಡಗೈ ಖಟಕಾಮುಖಮುದ್ರೆಯನ್ನೂ ಬಲಗೈ ಶಿಖರಮುದ್ರೆಯನ್ನೂ ಏರಿಸಬೇಕೆಂದು ಅಧಿಕವಾಗಿ ಹೇಳುತ್ತಾನೆ. 4..ವೈಷ್ಣವ ಸ್ಥಾನಕದಲ್ಲಿ ಒಂದು ಹೆಜ್ಜೆಯು ಸಮ (ಸ್ವಾಭಾವಿಕ) ವಾಗಿಯೂ ಇನ್ನೊಂದು ಎರಡೂವರೆ ಚೋಟುಗಳ ದೂರದಲ್ಲಿ ತ್ರ್ಯಶ್ರದಲ್ಲಿ (ತ್ರ್ಯಸ್ರವೆಂದರೆ ತ್ರಿಕೋನಾಕೃತಿಯಲ್ಲಿ, ಮುಮ್ಮೂಲೆಯಾಗಿ ಓರೆಯಾಗಿ ಮಾಡುವ ನೃತ್ತ) ಪಕ್ಷಸ್ಥಿತ ಭಂಗಿಯಲ್ಲಿ ಇರುತ್ತದೆ, ಮೊಳಕಾಲು ಸ್ವಲ್ಪ ಓರೆಯಾಗಿರುತ್ತದೆ,ಅಂಗಗಳು ಸೌಷ್ಠವದಲ್ಲಿರುತ್ತವೆ. ನಂದಿಕೇಶ್ವರನ ಮತದಲ್ಲಿ ಈ ವಿವರಗಳಿಲ್ಲ ; ಪಾದಗಳ ನಡುವೆ ಎರಡು ಚೋಟುಗಳ ದೂರವಿರುತ್ತವೆ, ಎರಡು ಕೈಗಳಲ್ಲಿಯೂ ಪತಾಕ ಮುದ್ರೆಯಿರುತ್ತದೆ. 5..ಚತುರಸ್ರದಲ್ಲಿ ಎರಡು ಪಾದಗಳ ಓರೆಯಾಗಿದ್ದು ಒಂದು ಮೊಳದ ದೂರದಲ್ಲಿರುತ್ತವೆಂದು ಭರತಾರ್ಣವವು ಹೇಳುತ್ತದೆ. 6..ಆಲೀಢದಲ್ಲಿ ಎರಡು ಪಾದಗಳ ಓರೆಯಾಗಿದ್ದು, ಬಲದ ಪಾದವು ಐದು ಚೋಟುಗಳ ದೂರದಲ್ಲಿರುತ್ತದೆ, ಎಡತೊಡೆಯು ಎತ್ತಿದ್ದು ನಿಶ್ಚಲವಾಗಿರುತ್ತದೆ. ಇದಕ್ಕೆ ನಂದಿಕೇಶ್ವರನು ಕೈಗಳು ಖಟಕಾಮುಖ, ಮುಷ್ಟಿ ಮುದ್ರೆಗಳನ್ನು ಧರಿಸಿರುತ್ತವೆಂಬ ಅಧಿಕೋಕ್ತಿಯನ್ನು ನೀಡುತ್ತಾನೆ. 7..ಆಲೀಢದಲ್ಲಿರುವ ಪಾದಗಳ ತೊಡೆಗಳ ತಿರುಗುಮುರುಗಾದರೆ ಅದೇ ಪ್ರತ್ಯಾಲೀಢವೆಂದು ಭರತಾರ್ಣವವು ನಿರೂಪಿಸುತ್ತದೆ. ಇವು ತಾಲಧಾರಿಯ ಸ್ಥಾನಕಗಳೂ ಹೌದು. ಮಂಡಲವೆಂಬ ಇನ್ನೊಂದು ಪುರುಷಸ್ಥಾನಕವೂ ಇದೆ. ಇದರಲ್ಲಿ ಎರಡು ಹೆಜ್ಜೆಗಳನ್ನು ಹೊರಪಕ್ಕಕ್ಕೆ ಓರೆಯಾಗಿ ಒಂದು ಗೇಣಿನ ಅಂತರದಲ್ಲಿ ನೆಲದ ಮೇಲಿಡಬೇಕು. ನಿತಂಬಗಳೂ ಮೊಳಕಾಲುಗಳೂ ಇದೇ ರೇಖೆಗಳಿಗೆ ಅಳವಟ್ಟು ನಿಶ್ಚಲವಾಗಿದ್ದು, ಎರಡೂವರೆ ಗೇಣಿನ ಬದಲು ನಾಲ್ಕು ಗೇಣುಗಳ ಅಂತರದಲ್ಲಿರಬೇಕು. ಇದು ಮಾರ್ದಂಗಿಕ ಸ್ಥಾನಕವೂ ಹೌದು.

Copyright Protected

ಚತುರಸ್ರವೆಂಬದು ನೃತ್ತಹಸ್ತವೂ ಹೌದು. ಇದು ಮೊಳಕೈ ಮೇಲೆ ಮತ್ತು ಹೆಗಲುಗಳಿಗೆ ಸಮವಾಗಿದ್ದು ಖಟಕಾಮುಖಗಳು ಪರಸ್ಪರ ಹಿಮ್ಮುಖವಾಗಿ ಎದೆಯ ಸ್ಥಾನದಲ್ಲಿ ಎಂಟು ಅಂಗುಲ ದೂರದಲ್ಲಿರುತ್ತವೆಂದು ಪಂಡರೀಕ ವಿಠ್ಠಲನು ತನ್ನ ನರ್ತನನಿರ್ಣಯದಲ್ಲಿ ಹೇಳುತ್ತಾನೆ.

ಚತುರಶ್ರ, ತ್ರ್ಯಶ್ಯ, ಮಿಶ್ರ, ಸಂಕೀರ್ಣ ಹಾಗೂ ಖಂಡಗಳು ದೇಶೀಯಲ್ಲಿಯಲ್ಲಿರುವ ತಾಳಗಳಲ್ಲಿ ಐದು ವಿಧಗಳು. ಚತುರಶ್ರವು ಎಂಟು ಮಾತ್ರೆಯದು, ತ್ರ್ಯಶ್ಯವು ಆರು ಮಾತ್ರೆಯದು, ಮಿಶ್ರವು ಮನು ಮಾತ್ರೆಯದು (14 ಮಾತ್ರೆ), ಎರಡರಷ್ಟು ಮಾತ್ರಾಕಾಲ ಇತ್ಯಾದಿಯು ತನ್ನ ಯೋನಿಯಂತೆ ಒಂದೊಂದು ಮಾತ್ರೆ ಹೆಚ್ಚಳದಿಂದ ಮೂರು ಸಂಕೀರ್ಣವೆಂಬ ಹೆಸರಿನ ಜಾತಿಗಳಿವೆ. ಇವುಗಳನ್ನು ಹೋಲದ ತಾಳಗಳು ಖಂಡಗಳೆಂದು ಪ್ರಸಿದ್ಧವಾಗಿವೆ ಎಂದು ತನ್ನ ನರ್ತನನಿರ್ಣಯದ ತಾಲಧಾರಿ ಪ್ರಕರಣದಲ್ಲಿ ಪಂಡರೀಕ ವಿಠ್ಠಲನು ಹೇಳುತ್ತಾನೆ. ಯೋನಿಯೆಂದರೆ ತಾನು ಪ್ರಕೃತಿರೂಪದಲ್ಲಿ ಬೇರೆ ವಿಕೃತಿಗಳನ್ನು ಉತ್ಪಾದಿಸುವುದು. ಎಂಟು ಮಾತ್ರೆಯ ಚತುರಸ್ರವಾದರೆ ಏಕಕಲೆ. ಅದೇ ಚತುರಸ್ರ ದೇಶೀತಾಳವು ಹದಿನಾರು ಮಾತ್ರೆಯದಾದರೆ ದ್ವಿಕಲೆ. ಮೂವತ್ತೆರಡು ಮಾತ್ರೆಯದಾದರೆ ಚತುಷ್ಕಲೆ ಇತ್ಯಾದಿ.

2..ಭಾವ — ಭಾವಶಬ್ದಕ್ಕೆ ನಿರ್ದಿಷ್ಟವೂ ಪ್ರತ್ಯೇಕವೂ ಆದ ಸ್ವಾರ್ಥವುಂಟು. ಭರತನು ಇದನ್ನು 'ಯಾವ (ಕಾವ್ಯ) ಅರ್ಥವು ವಿಭಾವಗಳಿಂದ ಪ್ರಸ್ತುತಗೊಂಡು, ಅನುಭಾವಗಳಿಂದ ಗೋಚರವಾಗುತ್ತದೋ ಅದೇ ಮಾತು, ಮೈ, ಮತ್ತು ಮನಸ್ಸಿನ ಸಾತ್ತ್ವಿಕಾಭಿನಯಗಳೊಡನೆ ಕೂಡಿಕೊಂಡರೆ ಭಾವವೆನ್ನಿಸುತ್ತದೆ. ವಾಚಿಕ, ಆಂಗಿಕ, ಸಾತ್ತ್ವಿಕಾಭಿನಯದಿಂದ ಮೂಲಕ ಮುಖರಾಗದಿಂದ ಕವಿಯ ಅಂತರಂಗದಲ್ಲಿರುವ ಭಾವವನ್ನು ಸಾಮಾಜಿಕರ ಅನುಭವಕ್ಕೆ ತಂದುಕೊಡುವುದೇ ಭಾವ' ಎಂದು ನಿರೂಪಿಸುತ್ತಾನೆ. ಇದಕ್ಕೆ ಪ್ರಸ್ತಾವನೆಯನ್ನು ಬರೆಯುತ್ತ ಭರತಮುನಿಯೇ 'ಇವುಗಳನ್ನು ಭಾವವೆಂದು ಏಕೆ ಕರೆಯುತ್ತಾರೆ? ( ರತಿ ಶೋಕಾದಿ) ಭಾವಗಳು ಪ್ರಕಟಗೊಂಡು ಗೋಚರಿಸುವುದರಿಂದಲೇ? ಮೆಲ್ಲಮೆಲ್ಲಗೆ ಚಿತ್ತವೃತ್ತಿಗಳನ್ನು ಅರಳಿಸಿ ಆಸ್ವಾದಿಸಬೇಕಾದ ಮನಃಸ್ಥಿತಿಯನ್ನುಂಟುಮಾಡುವುದರಿಂದಲೇ? ಹೇಳಲಾಗುವುದು – ಕಾವ್ಯಾರ್ಥಗಳನ್ನು ಮಾತು, ಶರೀರ ಹಾಗೂ ಸಾತ್ತ್ವಿಕ ಭಾವಗಳ ಮೂಲಕ ದೃಶ್ಯಗೊಳಿಸಿ ಪ್ರೇಕ್ಷಕರ ಅನುಭವಕ್ಕೆ ತಂದುಕೊಡುವುದೇ ಭಾವ. ಭಾವ ಶಬ್ದಕ್ಕೆ ಭೂ (ಆಗು) ಧಾತುವಿನ ಕರಣಾರ್ಥದಿಂದ ನಿಷ್ಪತ್ತಿಹೊಂದಿದೆ. ಭಾವಿತ, ವಾಸಿತ, ಕೃತ ಎಂಬ ಶಬ್ದಗಳಿಗೆ ಸಮಾನಾರ್ಥವಿದೆ. ಭಾವನೆಗೆ ವ್ಯಾಪನೆ ಎಂಬ ಅರ್ಥವಿದೆ' ಎಂದು ಬರೆಯುತ್ತಾನೆ.

3..ರಸ — ರಸವೆಂಬ ಈ ಸಂಸ್ಕೃತ ಶಬ್ದಕ್ಕೆ ನಾನಾರ್ಥಗಳಿದ್ದರೂ ಲಲಿತಕಲೆಗಳಲ್ಲಿ ರಸವು ಆಯಾ ಕಲೆಯ ಸೌಂದರ್ಯಾಂಶವೆಂದೂ, ಚಮತ್ಕಾರವೆಂದೂ ಶೃಂಗಾರಾದಿ ಎಂಟು (ಶಾಂತವನ್ನು ಸೇರಿಸಿದರೆ ಒಂಭತ್ತು) ಮನಃಸ್ಥಿತಿ ಪ್ರಕಾರಗಳೆಂದರೆ ರಸಕ್ಕೆ ಎರಡು ಬಗೆಯ ಪರಿಭಾಷೆಯನ್ನು ಪ್ರಾಚೀನ ಲಾಕ್ಷಣಿಕರು ಹೇಳುತ್ತ ಬಂದಿದ್ದಾರೆ. ಸಂಸ್ಕೃತ ಸಾಹಿತ್ಯದಲ್ಲಿ ಕಲಾಮೂಲವಾದ ಸೌಂದರ್ಯ ಜಿಜ್ಞಾಸೆಗೆಲ್ಲ ಪ್ರಮಾಣವಾದುದು ಭಾರತೀಯ ನಾಟ್ಯಶಾಸ್ತ್ರದಲ್ಲಿರುವ ಸೂತ್ರ : "ವಿಭಾವಾನುಭಾವವ್ಯಭಿಚಾರಿಸಂಯೋಗಾದ್ ರಸನಿಷ್ಪತ್ತಿಃ".

ಭರತನು ಈ ಸೂತ್ರವನ್ನು ಬರೆದದ್ದು ನಾಟ್ಯದಲ್ಲಿ ರಸಾನುಭವವನ್ನು ಕುರಿತು. ಆಂಗಿಕ, ಆಹಾರ್ಯ, ವಾಚಿಕ ಮತ್ತು ಸಾತ್ವಿಕಗಳೆಂಬ ಅಂಗಗಳುಳ್ಳ ನಾಟ್ಯದಲ್ಲಿ ರಸವು ಮುಖ್ಯವಾಗಿ ಮಾತುಗಳಿಂದ ವರ್ಣಿಸಬಹುದಾದ ಸನ್ನಿವೇಶಗಳಲ್ಲಿ ಅಡಗಿರುವಂತಹದು. ನಾಟ್ಯಶಾಸ್ತ್ರದ ವ್ಯಾಖ್ಯಾನಕಾರರುಗಳಾದ ಮೀಮಾಂಸಕ ಲೊಲ್ಲಟ, ನ್ಯಾಯದರ್ಶನ ಕೋವಿದನಾದ ಶಂಕುಕ, ಸಾಂಖ್ಯಸಿದ್ಧಾಂತಧುರಂಧರನಾದ ಭಟ್ಟನಾಯಕ, ಧ್ವನಿವಾದ ವಿದ್ವಾಂಸ ಆನಂದವರ್ಧನ, ಪ್ರತ್ಯಭಿಜ್ಞಾದರ್ಶನದ ಪ್ರತಿಪಾದಕರಲ್ಲಿ ಪ್ರಮುಖನಾದ ಅಭಿನವಗುಪ್ತ, ಮಮ್ಮಟ, ಧನಂಜಯ ಮುಂತಾದವರೆಲ್ಲರೂ ದೃಶ್ಯಕಾವ್ಯ ಮತ್ತು ಶ್ರವ್ಯಕಾವ್ಯಗಳ ರಸಜಿಜ್ಞಾಸೆಯನ್ನು ಕುರಿತು ನಾಟ್ಯಶಾಸ್ತ್ರವನ್ನು ಆಧರಿಸಿ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ಭರತಮುನಿಯ ರಸಸೂತ್ರದ ಜಿಜ್ಞಾಸೆಯು ನಡೆದಿರುವುದು ನಾಟ್ಯದ ವಿಷಯದಲ್ಲಿ ಮಾತ್ರ. ನಾಟ್ಯವೆಂದರೆ ರೂಪಗಳು ಮತ್ತು ಉಪರೂಪಕಗಳು. ನಂತರದ ಕಾಲದಲ್ಲಿ ದಂಡಿ, ಭಾಮಹಾದಿಗಳು ರಸಸೂತ್ರವನ್ನು ಕಾವ್ಯಾನುಭವಕ್ಕೆ ಅನ್ವಯಿಸಿ ವಿಸ್ತರಿಸಿದರು. ಭಾರತೀಯ ರಸಮೀಮಾಂಸಕರು ನಾಟ್ಯದ ಅರ್ಥವು ರಸ. ಆದುದರಿಂದ ಯಾವುದೇ ಕಲೆಯ ಅಥವಾ ಎಲ್ಲ ಕಲೆಗಳ ಅರ್ಥವು ರಸವೇ ಎಂದು ಪ್ರತಿಪಾದಿಸುತ್ತ ಬಂದಿದ್ದಾರೆ. ಆದರೆ ರಸಸಿದ್ಧಾಂತವು ಅತೀವವಾದ ಅಧ್ಯಯನ - ಚಿಂತನ - ತರ್ಕ - ಜಿಜ್ಞಾಸೆಗಳನ್ನು ಅಪೇಕ್ಷಿಸುವುದರಿಂದ ರಸವನ್ನು ಕುರಿತು ಆಯಾ ಗ್ರಂಥಾಧ್ಯಯನಗಳನ್ನೇ ಮಾಡುವುದುಚಿತ.

4..ಮುಖ - ಪ್ರತಿಮುಖ —

ಭರತನ ನಾಟ್ಯಶಾಸ್ತ್ರ ಹಾಗೂ ಧನಂಜಯನ ದಶರೂಪಕದಲ್ಲಿ ಸಂಧಿಗಳು, ಅವುಗಳ ಅಂಗಗಳು ಮತ್ತು ವಿಕಲ್ಪಗಳನ್ನು ಹೇಳಿರುವುದನ್ನು ಆಧರಿಸಿದೆ. ಮುಖ - ಪ್ರತಿಮುಖಗಳು ಕಾವ್ಯದ ಸಂಧ್ಯಂಗವಿಕಲ್ಪಗಳು. ಇತಿವೃತ್ತವೆಂಬುದು ಕಾವ್ಯ ಅಥವಾ ನಾಟಕದ ಶರೀರವೆನ್ನಿಸಿಕೊಳ್ಳುತ್ತದೆ. ಇತಿವೃತ್ತವು ಕಥೆಯನ್ನು ಹೇಳದೆ, ನಾಟಕದಲ್ಲಿ ಕಥೆಯ ಬೆಳವಣಿಗೆಯನ್ನು ಕ್ರಮಬದ್ಧವಾಗಿ ಅಭಿನಯದಿಂದ ಪ್ರತಿ ಹೆಜ್ಜೆಯಲ್ಲಿಯೂ ಪ್ರಾರಂಭದಿಂದ ಕೊನೆಯವರೆಗೂ ತೋರಿಸುತ್ತದೆ. ಕಥೆಯನ್ನು ಇತಿವೃತ್ತವು ದೃಶ್ಯಗಳ (ಘಟನೆಗಳಾಗಿ), ಶ್ರವ್ಯಗಳ (ಮಾತುಗಳಿಂದ) ಬೆಳವಣಿಗೆಯ ಹಂತಗಳನ್ನು ತೋರುವುದರಿಂದ ಇತಿವೃತ್ತವು ಕಾವ್ಯ ಅಥವಾ ನಾಟಕದ ಶರೀರವೆನ್ನಿಸಿಕೊಳ್ಳುತ್ತದೆ. ಇದಕ್ಕೆ ಪ್ರಾರಂಭ, ಪ್ರಯತ್ನ, ಪ್ರಾಪ್ತಿಸಂಭವ, ನಿಯತ ಫಲಪ್ರಾಪ್ತಿ ಮತ್ತು ಫಲಯೋಗಗಳೆಂಬ ಐದು ಅವಸ್ಥೆಗಳಿವೆ. ಈ ಐದು ಅವಸ್ಥೆಗಳಿಗೆ ಅನುಗುಣವಾಗಿ ಮತ್ತು ಅನುಕ್ರಮವಾಗಿ 'ಬೀಜ, ಬಿಂದು, ಪತಾಕಾ, ಪ್ರಕರೀ, ಮತ್ತು ಕಾರ್ಯಗಳೆಂಬ ಐದು ಅರ್ಥಪ್ರಕೃತಿಗಳಿವೆ. ಕಾವ್ಯ ಅಥವಾ ನಾಟಕದಲ್ಲಿ ಇವನ್ನು ಚೆನ್ನಾಗಿ ತಿಳಿದುಕೊಂಡು ಪ್ರಯೋಗಿಸಬೇಕು. ಇತಿವೃತ್ತವನ್ನು ಐದು ಸಂಧಿಗಳಲ್ಲಿ ವಿಭಾಗಿಸಲಾಗಿದೆ. ಅವು ಕಾವ್ಯಶರೀರದಲ್ಲಿ ಸಾಮಾನ್ಯವಾಗಿ ಪ್ರಾರಂಭದಿಂದ ಫಲಾಗಮನದ ಎಂದರೆ ಕೊನೆಯವರೆಗೂ ಮಾಡುವ ಕಾರ್ಯದಲ್ಲಿ ಐದೂ ಸಂಧಿಗಳು ಇರಬಹುದು. ಕೆಲವೊಮ್ಮೆ ಇಲ್ಲದೆಯೂ ಇರಬಹುದು. ಸಾಮಾನ್ಯವಾಗಿ ಐದು ಸಂಧಿಗಳೂ ಇರಲೇಬೇಕು. ಯಾವುದಾದರೂ ಸಂಧಿಯು ಲೋಪವಾಗಲೇ ಬೇಕಾಗಿದ್ದರೆ ಅದಕ್ಕೆ ಕಾರಣವಿರಲೇ ಬೇಕು.

#.. ಐದು ಸಂಧಿಗಳು ಮತ್ತು ಅವುಗಳ ಅಂಗಗಳು —

Copyright protected

ಸಂಧಿ ಎಂದರೆ ಕೂಡುವುದು ಎಂದರ್ಥ. ಇದು ಒಂದೇ ಪ್ರಯೋಜನಕ್ಕಾಗಿ ಹೊಂದಿಕೊಂಡ ಕಥಾಂಶಗಳಲ್ಲಿ, ಒಂದೊಂದರ ಫಲವೂ, ಆತ್ಯಂತಿಕವಾದ ಮತ್ತೊಂದು ಫಲವನ್ನು ಕೊಡುವಂತೆ ಕಥಾಂಶಗಳಲ್ಲಿ ಒಂದು ಇನ್ನೊಂದರ ನಡುವೆ ಉಂಟಾಗುವ ಸಂಬಂಧ. ಬೀಜವೇ ಮೊದಲಾದ ಐದು ಪ್ರಕೃತಿಗಳು ಹಾಗೂ ಪ್ರಾರಂಭ ಮೊದಲಾದ ಐದು ಅವಸ್ಥೆಗಳು ಅವುಗಳ ಒಂದನೆಯದು ಒಂದನೆಯದಕ್ಕೆ, ಎರಡನೆಯದು ಎರಡನೆಯದಕ್ಕೆ ಎಂಬಂತೆ ಕ್ರಮದಲ್ಲಿ ಕೂಡುವುದರಿಂದ ಇದಕ್ಕೆ 'ಸಂಧಿ' ಎಂಬ ಹೆಸರಾಗಿದೆ. ಇವು ಮುಖ, ಪ್ರತಿಮುಖ, ಗರ್ಭ, ವಿಮರ್ಶಕ (= ಅವಮರ್ಶ) ಮತ್ತು ನಿರ್ವಹಣ (= ಉಪಸಂಹಾರ, ಉಪಸಂಹೃತಿ) ಎಂಬವು.

1..ಮುಖ - ಇದು ಬೇರೆ ಬೇರೆ ರಸಗಳ ಪರಿಣಾಮವಾಗಿ ಎಲ್ಲಿ ಬೀಜವು ಇತಿ ವೃತ್ತವನ್ನು ಎಂದರೆ 'ಹೀಗೆ ಬೆಳೆಯಿತು' ಎಂದು ಅನುಕರಿಸುವುದು, 2..ಪ್ರತಿಮುಖ - ಈ ಬೆಳವಣಿಗೆಯ ಕಾಣಲಿ ಅಥವಾ ಕಾಣದಿರಲಿ ಎಲ್ಲಿ ಬೀಜವು ಒಡೆದು ಮುಖಸಂಧಿಯಲ್ಲಿ ಇಡಲ್ಪಡುತ್ತದೋ ಅದು ಪ್ರತಿಮುಖವಾಗುತ್ತದೆ. 3..ಗರ್ಭ - ದೊರೆಯಲಿ, ದೊರೆಯದಿರಲಿ ಬೀಜವು ಮೊಳಕೆಯೊಡೆಯುವುದು. 4..ವಿಮರ್ಶ - ಗರ್ಭದಿಂದ ಹೊರಬಿದ್ದ ಬೀಜಾರ್ಥವು ಲೋಭ-ಕ್ರೋಧ-ವ್ಯಸನ ಮುಂತಾಗಿ ಕಾಣುವುದು. 5..ನಿರ್ವಹಣ - ಮುಖಾದಿ ಸಂಧಿಗಳನ್ನು ಎಲ್ಲ ಹಂತಗಳಿಂದ ದಾಟಿ ಬೇರೆ ಬೇರೆ ಭಾವಗಳಿಂದ ಕೊನೆಗೊಳ್ಳುವುದು.

#.. ಮುಖ ಸಂಧಿ —

ಬೇರೆ ಬೇರೆ ರಸಗಳ ಪರಿಣಾಮವಾಗಿ ಬೀಜವು ಎಲ್ಲಿ ಇತಿವೃತ್ತವನ್ನು ಅನುಸರಿಸುತ್ತದೆಯೋ ಅದು ಮುಖ. ಈ ಸಂಧಿಯಲ್ಲಿ ಕಥಾವಸ್ತುವಿನ ಬೀಜದ ಸರಿಯಾದ ಉತ್ಪತ್ತಿಯಾಗಿ ಈ ಬೀಜವು ವಿವಿಧ ಪ್ರಯೋಜನಗಳಿಗೆ ಮತ್ತು ರಸಗಳಿಗೆ ಕಾರಣವಾಗುತ್ತದೆ. ಬೀಜವೆಂಬ ಅರ್ಥಪ್ರಕೃತಿ ಹಾಗೂ ಪ್ರಾರಂಭವೆಂಬ ಅವಸ್ಥೆಯ ಸಮನ್ವಯದಿಂದ ಅವೆರಡನ್ನೂ ಹೊಂದಿಸುವ 12 ಅಂಗಗಳು ಮುಖಸಂಧಿಯಲ್ಲಿರುತ್ತವೆ. ಪ್ರಹಸನ ಮುಂತಾದ ರೂಪಕಗಳಲ್ಲಿ ಧರ್ಮ, ಅರ್ಥ, ಕಾಮಗಳೆಂಬ 'ತ್ರಿವರ್ಗ' ರೂಪದ ಅರ್ಥವಿಲ್ಲದಿದ್ದರೂ ಕಥಾಬೀಜವು ರಸಗಳಿಗೆ ಕಾರಣವಾಗುತ್ತದೆ.

ಮುಖಸಂಧಿಗೆ ಹನ್ನೆರಡು ಅಂಗಗಳಿವೆ. ಅವು - ಉಪಕ್ಷೇಪ, ಪರಿಕರ, ಪರಿನ್ಯಾಸ, ವಿಲೋಭನ, ಯುಕ್ತಿ, ಪ್ರಾಪ್ತಿ, ಸಮಾಧಾನ, ವಿಧಾನ, ಪ್ರಭಾವ, ಉದ್ಭೇದ, ಕರಣ ಮತ್ತು ಭೇದ. ಇವುಗಳ ಅರ್ಥವನ್ನು ಪರಿಭಾಷೆಗಳೇ ಹೇಳಿವೆಯಾದರೂ ಸೌಲಭ್ಯಕ್ಕಾಗಿ ಸಂಧಿಗಳ ಅಂಗಗಳ ಲಕ್ಷಣವನ್ನು ಉದಾಹರಣೆಯ ಸಮೇತ ನೀಡಲಾಗಿದೆ.

1..ಉಪಕ್ಷೇಪ — ಕಾವ್ಯಾರ್ಥವನ್ನು ಮೊದಲು ಇರಿಸುವುದು (ನಾಟಕದ ಬೀಜವನ್ನು ಪ್ರಾರಂಭದಲ್ಲಿ ಬಹಿರಂಗವಾಗಿ ಹೇಳುವುದು)

ಉದಾ. – "ಲಾಕ್ಷಾಗೃಹಾನಲ ವಿಷಾನ್ನಸಭಾ ಪ್ರವೇಶೈಃ" (ವೇಣೀಸಂಹಾರ. ಪ್ರ. ಅಂಕ. ಶ್ಲೋ. ಪ್ರಭ್ಯ 8)

2..ಪರಿಕರ — ಈ ಅರ್ಥದ (ಬೀಜವನ್ನು ದೃಢ ಪಡಿಸುವುದು) ಹೆಚ್ಚಳವನ್ನು ತೋರಿಸುವುದು.

Copyright protected

ಉದಾ. – "ಧೃತರಾಷ್ಟ್ರಸ್ಯತನಯಾನ್ ಕೃತವೈರಾನ್ ಪದೇ ಪದೇ" (ವೇಣೀಸಂಹಾರ. ಪ್ರ. ಅಂ. ಶ್ಲೋ. 9)

3..ಪರಿನ್ಯಾಸ — ಅರ್ಥದ (ಪರಿಕರದ) ನಿಷ್ಪತ್ತಿ (ಸಿದ್ಧಿ)ಯನ್ನು ತೋರಿಸುವುದು.

ಉದಾ. –" ಪ್ರವೃದ್ಧಂಯದ್ವೈರಂ", (ವೇ. ಪ್ರ. ಅಂ. ಶ್ಲೋ. 10)

4..ವಿಲೋಭನ — ಫಲವನ್ನು ಕೊಡುವ ವಸ್ತುವಿನ ಗುಣವನ್ನು ವರ್ಣಿಸುವುದು.

ಉದಾ. - "ಮಂಥಾಯಸ್ತಾರ್ಣವಾಂಭಃಪ್ಲುತಕುಹರವಲನ್ಮಂದರಧ್ವಾನ ಧೀರಃ – ತಾಡಿತೋಽಯಂ ಎಂಬಲ್ಲಿಂದ ಯಶೋದುಂದುಭಿಃ" ಎಂಬಲ್ಲಿಯವರೆಗೆ (ವೇ. ಅಂ. 1.ಶ್ಲೋ.22).

5..ಯುಕ್ತಿ — ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳುವುದು, ಪ್ರಯೋಜನಗಳ ಸರಿಯಾದ ನಿಶ್ಚಯ ಅಥವಾ ಸಮರ್ಥನೆಯೆ ಯುಕ್ತಿ.

ಉದಾ. – " ಯುಷ್ಮಾನ್ ಹ್ರೇ ಪಯತಿ ಕ್ರೋಧಾಲ್ಲೋಕೇ ಶತ್ರು ಕುಲಕ್ಷಯಃ" (ವೇ. ಅಂ. 1. ಶ್ಲೋ. 17).

6.. ಪ್ರಾಪ್ತಿ — ಸುಖ ಬರುವುದು ಪ್ರಾಪ್ತಿ.

ಉದಾ. – ಚೇಟಿ —"ಭಟ್ಟಿನಿ, ಪರಿಕುಪಿತ ಇವಕುಮಾರೋ ಲಕ್ಷತೇ" ಎಂದು ಉಪಕ್ರಮಿಸಿದಾಗ ಭೀಮನು ಹೇಳುತ್ತಾನೆ. — "ಮಥ್ನಾಮಿ ಕೌರವಶತಂ ಸಮರೇ ನ ಕೋಪಾತ್ ದುಃಶಾಸನಸ್ಯರುಧಿರಂ ನಪಿಬಾಮ್ಯುರಸ್ತಃ | ಸಂಚೂರ್ಣಯಾಮಿಗದಯಾ ನ ಸುಯೋಧನೋರೂ ಸಂಧಿಂ ಕರೋತು ಭವತಾಂ ನೃಪತಿಃ ಪಣೇನ" (ವೇ. ಅಂ. 1. ಶ್ಲೋ 15) ಎನ್ನುತ್ತಾನೆ. ದ್ರೌಪದೀ — "ನಾಥ, ಅಶ್ರುತಪೂರ್ವಂ ಖಲ್ವೇತದ್ವಚನಂ, ತತ್ ಪುನಃ ಪುನರ್ಭಣ".

7..ಸಮಾಧಾನ — ಕಥಾಬೀಜದ ಮೂಡಿಬರುವಿಕೆಯಿಂದ ಸಮಾಧಾನ.

ಉದಾ. – "ಭೀಮಃ, ಭವತು ಪಾಂಚಾಲ ರಾಜತನಯೇ, ಶ್ರೂಯತಾಮಚಿರೇಣೈವ ಕಾಲೇನ"

ಚಂಚದ್ಭುಜಭ್ರಮಿತಚಂಡಗದಾಭಿಘಾತಸಂಚೂರ್ಣಿತೋರು ಯುಗಲಸ್ಯ ಸುಯೋಧನಸ್ಯ | ಸ್ತ್ಯಾನಾವನದ್ಧಘನಶೋಣಿತಶೋಣಪಾಣಿರುತ್ತಂ – ಸಯಿಷ್ಯತಿಕಚಾಂಸ್ತವ ದೇವಿ ಭೀಮಃ (ವೇ. ಅಂ. 1.ಶ್ಲೋ.21) ಹೀಗೆ ಮುಡಿ ಕಟ್ಟುವ ಉದ್ದೇಶಕ್ಕೆ ಬೀಜದ ಪುನಸ್ವೀಕಾರವು ಸಮಾಧಾನ.

8..ವಿಧಾನ — ಸುಖದುಃಖಗಳೆರಡನ್ನೂ ಉಂಟುಮಾಡುವುದು ವಿಧಾನ.

ಉದಾ. – ದ್ರೌಪದೀ – "ನಾಥ, ಅನ್ಯಚ್ಚ ಪುನರಪಿ ಯುಷ್ಮಾಭಿಃ ಆಗತ್ಯ ಅಹಂ ಸಮಾಶ್ವಾಸಯಿತವ್ಯಾ". ಭೀಮ – "ನನು ಪಾಂಚಾಲ ರಾಜತನಯೇ, ಕಿಮದ್ಯಾಪ್ಯಲೀಕಾಶ್ವಾಸನಯಾ? ಭೂಯಃ ಪರಿಭವ ಕ್ಲಾಂತಿ ಲಜ್ಜಾ ವಿಧುರಿ ತಾನನಂ |

ಅನಿಶ್ಯೇಷಿತ ಕೌರವ್ಯಂ ನ ಪಶ್ಯಸಿ ವೃಕೋದರಂ (ವೇ. ಅಂ. 1ಶ್ಲೋ. 26) ಇಲ್ಲಿ ಯುದ್ಧದ ಸುಖದುಃಖಗಳು ವಿಧಾನ.

9..ಪರಿಭಾವ — ಅದ್ಭುತವಾದ ಆವೇಶ, ಕುತೂಹಲದಲ್ಲಿ ಪರಿಣಮಿಸುವ ಮನಸ್ಸಿನ ಅಸ್ವಸ್ಥತೆಗಳು ಪರಿಭಾವ. (ಪರಿಭಾವನಾ)

ಉದಾ. — ದ್ರೌಪದೀ – "ನಾಥ ಕಿಮಿದಾನೀಮೇಷಃ, ಪ್ರಲಯಜಲಧರಸ್ತನಿತ ಮಾಂಸಲಃ ಕ್ಷಣೇಕ್ಷಣೇ ಸಮರದುಂದುಭಿಸ್ತಾಡ್ಯತೇ. (ವೇ. ಅಂ. 1.)ಇಲ್ಲಿ ಲೋಕೋತ್ತರ ವಾದ ಸಮರದುಂದುಭಿಯ ಧ್ವನಿಯಿಂದ ಉಂಟಾಗುವ ವಿಸ್ಮಯದ ರಸಾವೇಶವೇ ಪರಿಭಾವ (ನಾ).

10..ಉದ್ಭೇದ — ಬೀಜಾರ್ಥ ಮೊಳಕೆಯೊಡೆಯುವುದು ಎಂದರೆ ರಹಸ್ಯವನ್ನು ಭೇದಿಸುವುದು ಉದ್ಭೇದ.

ಉದಾ. –" ಆರ್ಯಕಿಮಿದಾನೀಮಧ್ಯವಸ್ಯತಿ ಗುರುಃ. ನೇಪಥ್ಯೇ ಯತ್ಸತ್ಯವ್ರತಭಂಗಭೀರುಮನಸಾ......ಯೌಧಿಷ್ಠಿರಂ ಜೃಂಭತೇ". (ವೇ. ಪ್ರ. ಅಂ. ಶ್ಲೋ. 24).ಇಲ್ಲಿ ದ್ರೌಪದಿಯ ಕೇಶಬಂಧನ ಉದ್ದೇಶಕ್ಕೆ ಹೊಂದಿ ಧರ್ಮರಾಜನ ಕ್ರೋಧವು ಪ್ರಕಟವಾಗಿರುವುದರಿಂದ ಉದ್ಭೇದ.

11..ಕರಣ – ಪ್ರಸ್ತುತ ವಿಷಯವನ್ನಾರಂಭಿಸುವುದು ಕರಣ.

ಉದಾ. – ಭೀಮಃ – "ತತ್ ಪಾಂಚಾಲಿ, ಗಚ್ಛಾಮೋ ವಯಮಿದಾನೀಂ ಕುರುಕುಲಕ್ಷಯಾಯ". ಸಹದೇವಃ –" ಆರ್ಯ, ಗಚ್ಛಾಮೋ ಇದಾನೀಂ ಗುರುಜನಾನುಜ್ಞಾತಾಃ ವಿಕ್ರಮಾನುರೂಪಮಾಚರಿತುಂ" (ವೇ. ಅಂ. 1). ಇಲ್ಲಿ ಮುಂದಿನ ಅಂಕದಲ್ಲಿ ಬರಲಿರುವ ಯುದ್ಧದ ಆರಂಭವು ಸೂಚಿತವಾಗಿದೆ.

12..ಭೇದ — ಉದಾಸೀನತೆಯನ್ನು ಕೆಣಕಿ, ಪ್ರೋತ್ಸಾಹವನ್ನುಂಟುಮಾಡುವುದು ಭೇದ.

ಉದಾ. –. ದ್ರೌಪದೀ – "ನಾಥ. ಮಾಖಲುಯಾಜ್ಞಸೇನೀ ಪರಿಭವೋದ್ದೀಪಿತ ಕೋಪಾನಲಾ ಅನಪೇಕ್ಷಿತಶರೀರಾಃ ಪರಿಕ್ರಮಿಷ್ಯಥ. ಯತಃ ಅಪ್ರಮತ್ತ ಸಂಚರಣೀಯಾನಿ ರಿಪುಬಲಾನಿ ಶ್ರೂಯಂತೇ" . ಭೀಮ – "ಅಯಿಸುಕ್ಷತ್ರಿಯೇ ಅನ್ಯೋನ್ಯಾಸ್ಫಾಲಭಿನ್ನಾ......ಪಂಡಿತಾಃ ಪಾಂಡುಪುತ್ರಾಃ || (ವೇ. ಅಂ. 1.ಶ್ಲೋ.27.) ಇಲ್ಲಿ ವಿಷಣ್ಣಳಾದ ದ್ರೌಪದಿಗೆ ಕ್ರೋಧೋತ್ಸಾಹ ಬೀಜಕ್ಕೆ ಅನುಗುಣವಾಗಿ ಪ್ರೋತ್ಸಾಹವನ್ನು ಕೊಡುವುದು ಭೇದ. ಹೀಗೆ ಈ ಹನ್ನೆರಡು ಅಂಗಗಳು ಅರ್ಥಪ್ರಕೃತಿಗಳಲ್ಲಿ ಮೊದಲನೆಯದಾದ 'ಬೀಜ'ದ ಮತ್ತು ಅವಸ್ಥೆಗಳಲ್ಲಿ 'ಪ್ರಾರಂಭ'ದ ದ್ಯೋತಕಗಳಾಗಿವೆ ಇವುಗಳಲ್ಲಿ ಉಪಕ್ಷೇಪ, ಪರಿಕರ, ಪರಿನ್ಯಾಸ, ಯುಕ್ತಿ, ಉದ್ಭೇದ, ಸಮಾಧಾನ.... ಈ ಆರನ್ನೂ ಅವಶ್ಯವಾಗಿ ಪ್ರಯೋಗಿಸಲೇಬೇಕೆಂದು ಧನಂಜಯನು ಹೇಳುತ್ತಾನೆ.

#.. ಪ್ರತಿಮುಖ ಸಂಧಿ — ಹಲವು ಬಾರಿ ಕಾಣಲಿ, ಹಲವು ಬಾರಿ ಕಾಣದಿರಲಿ, ಎಲ್ಲಿ ಬೀಜವು ಒಡೆದು ಬಿಂದು ಪ್ರಯತ್ನಗಳ ಹೊಂದಿಕೆಯಿಂದ ಮುಖಸಂಧಿಯಲ್ಲಿ ಇಡಲ್ಪಟ್ಟು

Copyright protected

ಪ್ರಕಟವಾಗುವುದೋ ಅದು ಪ್ರತಿಮುಖ ಸಂಧಿ. ಉದಾಹರಣೆಗೆ, ವೇಣೀಸಂಹಾರದ ಎರಡನೆಯ ಅಂಕದಲ್ಲಿ ಧರ್ಮರಾಜನ ಕ್ರೋಧಬೀಜವು ಭೀಷ್ಮಾದಿಗಳ ಮರಣದಿಂದ ಸ್ವಲ್ಪ ಲಕ್ಷ್ಯವೂ, ಕರ್ಣಾದಿಗಳು ಬದುಕಿರುವುದರಿಂದ ಸ್ವಲ್ಪ ಅಲಕ್ಷ್ಯವೂ ಆಗಿ ಪ್ರಕಟವಾಗಿದೆ. "ಸಹಭೃತ್ಯಗಣಂ ಸಭಾಂಧವಂ...... ನಚಿರಾತ್ ಪಾಂಡುಸುತಃ ಸುಯೋಧನಂ | ದುಶ್ಯಾಸನಸ್ಯ ಹೃದಯ ಕ್ಷತಜಾಂಬುಪಾನೇ..... ಜಯದ್ರಥೇऽಪಿ ತಥಾ ಪ್ರತಿಜ್ಞಾ || ಈ ಶ್ಲೋಕಗಳಿಂದ ವ್ಯಕ್ತವಾದ ಬೀಜದ ಉದ್ಭೇದವು ಪ್ರತಿಮುಖಸಂಧಿ. ಮೊದಲನೆಯ ಅಂಕದಲ್ಲಿ ಸ್ಥಾಪಿತವಾದ ಬೀಜದ 'ಬಿಂದು' ಎಂಬ ಅರ್ಥಪ್ರಕೃತಿ ಮತ್ತು 'ಪ್ರಯತ್ನ' ವೆಂಬ ಅವಸ್ಥೆಗಳ ಯೋಜನೆಯಿಂದ ಪ್ರತಿಮುಖಸಂಧಿಗೆ - ವಿಲಾಸ, ಪರಿಸರ್ಪ, ವಿಧೂತ, ತಾಪನ, ನರ್ಮ, ನರ್ಮದ್ಯುತಿ, ಪ್ರಗಮನ, ನಿರೋಧ(ಕ) , ಪರ್ಯುಪಾಸನ, ಪುಷ್ಪ, ವಜ್ರ, ಉಪನ್ಯಾಸ, ವರ್ಣಸಂಹಾರ ಎಂಬ ಹದಿಮೂರು ಅಂಗಗಳಾಗುತ್ತವೆ.

1..ವಿಲಾಸ — ರತಿ ಸುಖದ ಇಚ್ಛೆಯ ವಿಲಾಸ.

ಉದಾ. – "ವಿನಯಂಧರ ಅದ್ಯಖಲು ಭಾನುಮತೀ..... ಯತಯತ್ರಸ್ಥಾ ಭಾನುಮತೀ" . (ವೇ. ಅಂ. 2.)

2..ಪರಿಸರ್ಪ — ಒಮ್ಮೆ ಕಂಡು ಅದು ಮತ್ತೊಮ್ಮೆ ಕಳೆದುಹೋದರದನ್ನು ಹುಡುಕುವುದು ಪರಿಸರ್ಪ.

ಉದಾ. – "ಯೋऽಯಮುದ್ಯತೇಷುಬಲವತ್ಸು | ಆಶಸ್ತ್ರಗ್ರಹಣಾತ್....... ಅಭಿಮನ್ಯೋರ್ವಧಾತ್" || (ವೇ. ಅಂ. 2.ಶ್ಲೋ.2) ಕಂಚುಕಿ ಹೇಳುವ ಈ ಮಾತಿನಲ್ಲಿ ಭೀಷ್ಮಾಧಿಗಳ ವಧೆಯಿಂದ ಕಂಡು ಅನಂತರ ಅಭಿಮನ್ಯು ವಧೆಯಿಂದ ಬೀಜವು ನಷ್ಟವಾಯಿತು. ಆದರೆ ವಾಸುದೇವನ ಸಹಾಯವಿದ್ದದ್ದರಿಂದ ಬಲಿಷ್ಠರಾಗಿದ್ದ ಪಾಂಡವರು ಯುದ್ಧವನ್ನಾರಂಭಿಸಿರುವುದರಿಂದ ಬಿಂದು, ಬೀಜ, ಪ್ರಯತ್ನಗಳಿಗೆ ಹೊಂದಿ ಕಂಚುಕಿ ಮಾತಿನಲ್ಲಿ ಪುನಃ ಬೀಜದ ಅನುಸರಣವು ಕಂಡುಬಂದಿದೆ.

3..ವಿಧೂತ — ಭರತನು ಇದನ್ನು, ತೋರಿಸಿದ ಅನುನಯವನ್ನು ಸ್ವೀಕರಿಸದಿರುವುದು ಎಂದು ಹೇಳಿದರೆ ಧನಂಜಯನು 'ವಿಧೂತಂ ಸ್ಯಾದರತಿಃ' ಎಂದಿದ್ದಾನೆ. ನಿರಾಶೆ ಅಥವಾ ದುಃಖಭಯಗಳಿಂದ ಉಂಟಾಗುವ ಅನಾಸ್ಥೆಗೆ ಅರತಿಯೆಂದು ಹೆಸರು.

ಉದಾ. – ಭಾನುಮತಿಯ ದುಸ್ಸ್ವಪ್ನದರ್ಶನ, ದುರ್ಯೋಧನನ ಅನಿಷ್ಟಶಂಕೆ ಮತ್ತು ಪಾಂಡವವಿಜಯಶಂಕೆ ಇವುಗಳಿಂದ ಉಂಟಾಗುವ ರತಿಯ ಅನಾಸ್ಥೆಯು ಅರತಿಯು. "ಸಖಿ ಭಾನುಮತಿಯ..... ತತಃ ಪ್ರವಿಶತಿ ದುರ್ಯೋಧನ ಕಂಚುಕೀ ಚ". (ವೇ. ಅಂ. 2.)

4..ಭರತನು ನಾಲ್ಕನೆಯದಾಗಿ ತಪನವನ್ನು ಹೇಳಿದರೆ ಅದರ ಸ್ಥಾನದಲ್ಲಿ ಧನಂಜಯನು ಶಮವನ್ನು ಹೇಳಿದ್ದಾನೆ. 'ತಾಪನ'ವೆಂದರೆ ಅಪಾಯವನ್ನು ಕಾಣುವುದು. 'ಶಮ' ವೆಂದರೆ ಅರತಿಯ ಪರಿಹಾರ.

ಶಮಕ್ಕೆ ಉದಾ. – "ದೇವತಾ ಸಂಕೀರ್ತನೇನ ಚ ಪರಿಹರಿಷ್ಯಾವಃ". (ವೇ. ಅಂ. 2)

5..ನರ್ಮ — ವಿನೋದಕ್ಕಾಗಿ ನುಡಿದದ್ದು, ಪರಿಹಾಸ ಪೂರ್ಣವಾದ ಮಾತುಗಳು 'ನರ್ಮ'.

ಉದಾ. – "ರಾಜೋಪಸೃತ್ಯ..... ಭೂಭೂಮೌಪಾತಯತಿ ದೇವಿ" (ವೇ. ಅಂ. 2). ಇಲ್ಲಿ ದುಸ್ಸ್ವಪ್ನ ದರ್ಶನ ಶಾಂತಿಗಾಗಿ ದೇವಪೂಜೆಯನ್ನು ಕೈಗೊಂಡ ಭಾನುಮತಿಗೆ ದುರ್ಯೋಧನನ ಪರಿಹಾಸವು ಕಂಡುಬರುತ್ತಿದೆ.

6..ನರ್ಮದ್ಯುತಿ — ದೋಷವನ್ನು ಮುಚ್ಚಿಡಲೆಂದು ಮಾಡಿದ ಪರಿಹಾಸವು ನರ್ಮದ್ಯುತಿ ಎಂದು ಭರತನು ಹೇಳಿದರೆ, ಧನಂಜಯನು 'ಧೃತಿಸ್ತಜ್ಜಾದ್ಯುತಿರ್ಮತಾ' – ಪರಿಹಾಸದಿಂದ ಹುಟ್ಟಿದ ಧೈರ್ಯವು ನರ್ಮದ್ಯುತಿಯೆನ್ನುತ್ತಾನೆ.

ಉದಾ. – "ಕಿಂ ಕಂಠೇ ಶಿಥಿಲೀಕೃತಃ...... ಯೋಗ್ಯೇಮಯಿ". ವೇ. ಅಂ. 2. ಶ್ಲೋ 9.).

7..ಪ್ರಗಮನ — ಉಕ್ತಿಗೆ ಪ್ರತ್ಯುಕ್ತಿಯು ಪ್ರಗಮ ಅಥವಾ ಪ್ರಗಮನ. ಇದು ಪಾತ್ರಗಳಲ್ಲಿ ಪರಸ್ಪರ ನಡೆಯುವ ಬೀಜಕ್ಕೆ ಸಹಾಯವಾಗುವ ಮಾತು ಮತ್ತು ಪ್ರತಿಮಾತುಗಳು.

ಉದಾ. – "ವಿಕಿರಧವಲ..... ಸ್ಪೃಶಾಸ್ಮಾನ್" (ವೇ. ಅಂ. 2. ಶ್ಲೋ. 16)

8..ನಿರೋಧ — ಕಷ್ಟದಲ್ಲಿ ಸಿಕ್ಕಿಬೀಳುವುದು, ಒಳ್ಳೆಯದಕ್ಕೆ ತಡೆಯಾಗುವುದು ನಿರೋಧನ ಅಥವಾ ನಿರೋಧ.

9..ಪರ್ಯುಪಾಸನ — ನಿರೋಧನ ನಿವಾರಣೆಗಾಗಿ ಇನ್ನೊಬ್ಬರನ್ನು ಒಲಿಸಿಕೊಳ್ಳುವುದು, ಸಿಟ್ಟಿಗೆದ್ದವರನ್ನು ಶಾಂತಿಗೊಳಿಸುವುದು. ಪರ್ಯುಪಾಸನಕ್ಕೂ, ನಿರೋಧನಕ್ಕೂ ದಶರೂಪಕದಲ್ಲಿ ಉದಾಹರಣೆಯಿಲ್ಲ.

10..ಪುಷ್ಪ — ವಿಶಿಷ್ಟ ರೀತಿಯ ಮಾತನ್ನಾಡುವ ಸಮಯದಲ್ಲಿ ಬೀಜದ ಉದ್ಘಾಟನವಾದರದು ಪುಷ್ಪವೆನ್ನಿಸಿಕೊಳ್ಳುತ್ತದೆ.

ಉದಾ. – "ರೇಣುರ್ಬಾಧಾಂ ವಿಧತ್ತೇ....... ಕರೋತಿಕರೋತಿ"|| (ವೇ. ಅಂ. 2. ಶ್ಲೋ. 22.)
"ಲೋಲಾಂಶುಕಸ್ಯ...... ಮಮೋರುಯುಗ್ಮಂ || ಶ್ಲೋ. 23)

11..ವಜ್ರ — ಪ್ರತ್ಯಕ್ಷವಾಗಿ ಒಬ್ಬರ ಎದುರೆದುರೇ ನಿಷ್ಠುರವಾಗಿ ಮಾತುಗಳನ್ನಾಡುವುದು ವಜ್ರ.
ಉದಾ. – "ತದ್ಭೀರುತ್ವಂ ತವ..... ಕುಲೇ ಜನ್ಮ ಕೌಲೀನಮೇತತ್ " (ವೇ. ಅಂ. 2. ಶ್ಲೋ. 11)

12..ಉಪನ್ಯಾಸ — ಕಾರಣವನ್ನು ನೀಡಿ ಮಾತನಾಡುವುದೆಂದು ಭರತನು ಲಕ್ಷಿಸಿದರೆ, ಧನಂಜಯನು ಮಾತು ಉಪಾಯಸಹಿತವಾಗಿರುತ್ತದೆನ್ನುತ್ತಾನೆ.

ಉದಾ. – "ಪ್ರೇಮಾಬದ್ಧಸ್ತಿಮಿತನಯನಾಪೀಯಮಾನಾಬ್ಜ..... ಕಿಂನ ದುರ್ಯೋಧನಸ್ಯ || (ವೇ. ಅಂ. 2.ಶ್ಲೋ.18).

13.. ವರ್ಣಸಂಹಾರ — ನಾಲ್ಕು ವರ್ಣಗಳೂ ಕೂಡಿ ಬರುವುದು. ಎಂದರೆ ಬ್ರಾಹ್ಮಣಾದಿ ನಾಲ್ಕು ವರ್ಣಗಳ ಜನರೂ ಒಂದೆಡೆಯೇ ಸೇರುವುದು ವರ್ಣಸಂಹಾರ. ಅಥವಾ ಬೇರೆ ಬೇರೆ

Copyright protected

ಪಾತ್ರಗಳು ಒಂದೆಡೆಯೇ ಸೇರಿದರೂ ವರ್ಣಸಂಹಾರ. ಇದಕ್ಕೆ ಧನಂಜಯನು ಉದಾಹರಣೆಯನ್ನು ನೀಡಿಲ್ಲ.

#.. (2) ಮುಖ — ಮುಖವೆಂದರೆ ಪೂರ್ವರಂಗ. ಅದನ್ನು ಹಿಂಬಾಲಿಸಿ ಪೂರ್ವರಂಗದ ನಂತರ ಮಾಡುವ ನೃತ್ತ ಚಲನೆಯು ಮುಖಚಾಲಿಯೆಂದು ನೃತ್ತವನ್ನು ಬಲ್ಲ ಪ್ರಾಚೀನ ಪಂಡಿತರು ಹೇಳಿದ್ದಾರೆಂದು ಪಂಡರೀಕವಿಠ್ಠಲನು ತನ್ನ ನರ್ತನನಿರ್ಣಯದಲ್ಲಿ ಹೇಳಿದ್ದಾನೆ. (ಪ್ರಕರಣ. 4.ಶ್ಲೋ 662)

#.. ಚಾರೀ — ಚಾರೀಯು ಪಾದ, ಜಂಘಾ, ತೊಡೆ ಮತ್ತು ಸೊಂಟ ಇವು ಒಂದು ರೇಖೆಯಲ್ಲಿ ಇರುವುದರಿಂದ ನಿಷ್ಪನ್ನವಾಗುತ್ತದೆ, ಇವು ನಿಯಮಕ್ಕನುಗುಣವಾಗಿ ಒಂದನ್ನೊಂದು ಆಶ್ರಯಿಸಿದ್ದರಿಂದಲೂ ಶರೀರಕ್ಕೆ ಸಂಬಂಧಿಸಿದ್ದರಿಂದಲೂ ಚಾರೀ ಎಂಬುದು ವ್ಯಾಯಾಮ ಎನ್ನಿಸಿಕೊಳ್ಳುತ್ತದೆ. ಒಂದು ಪಾದದ/ ಹೆಜ್ಜೆಯ ಪ್ರಚಾರವು ಚಾರೀ ಎಂದೆನ್ನಿಸಿಕೊಳ್ಳುತ್ತದೆ. ಎರಡು ಪಾದ/ಹೆಜ್ಜೆಗಳ ಕ್ರಮಕ್ಕೆ ಕರಣವೆಂದು ಹೆಸರು. ಕರಣಗಳು ಕೂಡಿಬಂದರೆ ಅದಕ್ಕೆ ಖಂಡವೆಂದು ಹೆಸರು. ಮೂರು ಇಲ್ಲವೇ ನಾಲ್ಕು ಖಂಡಗಳ ಸಂಯೋಗವು ಮಂಡಲವೆನ್ನಿಸಿಕೊಳ್ಳುತ್ತದೆ. ಚಾರೀಯಿಂದಲೇ ನೃತ್ತದ ಪ್ರಾರಂಭ. ಚಾರೀಯಿಂದಲೇ ಮುಂದಿನ ಪ್ರತಿಯೊಂದು ಚಲನವಲನವೂ. ಚಾರೀಗಳಿಂದಲೇ ಶಸ್ತ್ರ ಮೊದಲಾದವುಗಳನ್ನು ಬಿಡುವುದು. ಯುದ್ಧಗಳಲ್ಲಿ ಚಾರೀಗಳಿಗೇ ಪ್ರಾಧಾನ್ಯ. ನಾಟ್ಯ ಎಂಬುದರ ಉಗಮವು ಕೂಡ ಚಾರೀಗಳಲ್ಲೇ ಸ್ಥಿರವಾಗಿ ನಿಂತಿದೆ. ಚಾರೀಯ ಹೊರತಾಗಿ ನಾಟ್ಯದಲ್ಲಿ ಯಾವ ಅಂಗವೂ (ಶರೀರ ಭಾಗೂ) ಕ್ರಿಯಾತ್ಮಕವಾಗುವುದಿಲ್ಲ, ಯುದ್ಧದಲ್ಲಾಗಲೀ, ನೃತ್ತದಲ್ಲಾಗಲೀ, ನಡಿಗೆಯಲ್ಲಾಗಲೀ ಯಾವ ಯಾವ ಚಾರೀಗಳನ್ನು ಹೇಗೆ ಹೇಗೆ ಬಳಸಬೇಕೆಂದು ಭರತಮುನಿಯು ಹೇಳಿ ಚಾರೀ ವಿಧಾನದ ಲಕ್ಷಣಗಳನ್ನು ಹೇಳಿದ್ದಾನೆ. (ಅ. 11. ಶ್ಲೋ. 1-7.) ಇದರಲ್ಲಿ ಭೂಮಿಗತಿ, ಆಕಾಶಗತಿಗಳಿಗೆ ಸಂಬಂಧಿಸಿದ ಚಾರೀಗಳೂ ವಿವರಣೆಗಳನ್ನೂ ಸೇರಿದಂತೆ ನಾಟ್ಯಶಾಸ್ತ್ರದ 11 ಅಧ್ಯಾಯವಿಡೀ ಚಾರೀವಿಧಾನಗಳಿಗೇ ಮೀಸಲಾಗಿದೆ.

---

ಉತ್ತಮೋತ್ತಮಕ ಲಾಸ್ಯಾಂಗ—

-----------------------------------

ವಿಚಿತ್ರ ಶ್ಲೋಕಬಂಧಂ ಯತ್ ನಾನಾರಸ ಸಮಾಶ್ರಯಮ್
ಉತ್ತಮೋತ್ತಮಕಂ ತತ್ ಸ್ಯಾತ್ ಲೀಲಾಭಾವಮನೋಹರಮ್ |೬೮|||

ಅ — ಆಶ್ಚರ್ಯ ಮೂಡಿಸುವ ಬಂಧಗಳನ್ನುಳ್ಳ ಶ್ಲೋಕಗಳನ್ನು ಹೊಂದಿರುವ, ನಾನಾರಸಗಳಿಗೆ ಆಶ್ರಯವಾಗಿ ಲೀಲೆ ಎಂಬ ಭಾವದಿಂದ ಮನೋಹರವಾದದು ಉತ್ತಮೋತ್ತಮಕ.

Copyright protected

ಪರಿಭಾಷೆಗಳು —

#.. ಉತ್ತಮೋತ್ತಮಕ — ಉತ್ತಮೋತ್ತಮಕಕ್ಕೆ ಮೊದಲು ನಟ್ಟುಕಟಕವನ್ನೂ, ನಂತರ ನಾನಾರ್ಥಗಳ ಶ್ಲೋಕವನ್ನೂ ಪಠಿಸಬೇಕು. ಈ ಲಾಸ್ಯಾಂಗದ ಪದದ ವಸ್ತು ಅಪರಾಂತಕ ಶಾಖಾದಾಗಿದ್ದು ಶೀರ್ಷಿಕವು ಯಥಾಕ್ಷರ ಪಂಚಪಾಣಿ ತಾಲದಲ್ಲಿರಬೇಕು. ಪ್ರಯೋಗವು ಹೇಲಾ (ಭಾವ) ಗಳ ಅಭಿವ್ಯಕ್ತಿಯಿಂದ ಕಂಗೊಳಿಸಬೇಕು ಎಂಬ ಲಕ್ಷಣಗಳನ್ನು ಭರತನು ನೀಡುತ್ತಾನೆ. ಅಭಿನವಗುಪ್ತನು ಈ ಲಾಸ್ಯಾಂಗವು ನಾಟ್ಯದಲ್ಲಿ ರಸೋತ್ಕರ್ಷವನ್ನುಂಟು ಮಾಡುವುದರಿಂದಲೂ ರಸವನ್ನು ಪ್ರಚೋದಿಸುವುದರಿಂದಲೂ, ರಸಾಧೀನವಾದದ್ದರಿಂದಲೂ ಲಾಸ್ಯಾಂಗಗಳಲ್ಲಿಯೇ ಉತ್ತಮವಾದದ್ದರಿಂದಲೂ ಇದಕ್ಕೆ ಈ ಹೆಸರಿದೆಯೆನ್ನುತ್ತಾನೆ. ಈ ಲಾಸ್ಯಾಂಗದಲ್ಲಿ ಭಾವಾಭಿಘಾತವು ಅತ್ಯಂತ ಆಕರ್ಷಕವಾಗಿದ್ದು, ಪ್ರಸಂಗಗಳಲ್ಲಿ ಪಾತ್ರಗಳು ಅಗ್ರಮಾನ್ಯತೆಯನ್ನು ಹೊಂದಿದ್ದು , ಬಹುವಿಧದ ನಾವೀನ್ಯತೆಯನ್ನು ಹೊಂದಿದ, ರಸಭರಿತ ಪದ್ಯಪಾದಗಳನ್ನು ಹೊಂದಿರುತ್ತವೆ. (ಉದಾ. - ಕಾಳಿದಾಸನ ವಿಕ್ರಮೋರ್ವಶೀಯದ ನಾಲ್ಕನೆಯ ಅಂಕದಲ್ಲಿ ಪುರೂರವನಾಡಿದ ಪದ್ಯಪಾದಗಳು). ಉತ್ತಮೋತ್ತಮಕವು ಅನುಭಾವ, ಹೇಲಾ, ಹಾವ, ರೇಚಕ - ಎಲ್ಲವುಗಳಿಂದ ಉದ್ದೀಪನಗೊಂಡು ಸುಂದರವಾಗಿರುತ್ತದೆ. ನಾನ್ಯದೇವನು ಈ ಲಾಸ್ಯಾಂಗದಲ್ಲಿ ಪ್ರಿಯತಮನು ತನ್ನ ಪ್ರೇಯಸಿಯಲ್ಲಿ ಪ್ರೇಮಪ್ರಭಾವದ ಮತ್ತಿನಲ್ಲಿದ್ದು, ಅತ್ಯಂತ ಆಕರ್ಷಕವಾದ, ಮಧುರವಾದ ಸ್ವರಗಳನ್ನು, ಸುಲಲಿತ ಲಯದಲ್ಲಿ ಗಾಯನವನ್ನು ಮಾಡುತ್ತಿರುತ್ತಾನೆಂದು ಹೇಳಿದ್ದಾನೆ. ಭೋಜನು ಈ ಲಾಸ್ಯಾಂಗಕ್ಕೆ ಉದಾಹರಣೆಯಾಗಿ ಶ್ರೀಹರ್ಷನ ಅರತ್ನಾವಳಿಯ ಮೂರನೆಯ ಅಂಕದಲ್ಲಿ ರಾಜನು ಮರೆಯಲ್ಲಿದ್ದ ವಾಸವದತ್ತೆಯನ್ನೇ ಸಾಗರಿಕಾಳೆಂದು ಭಾವಿಸಿ ನಡೆಸಿದ ಸಂಭಾಷಣೆಯನ್ನು ನೀಡುತ್ತಾನೆ. ಶಾರದಾತನಯನು ಉತ್ತಮೋತ್ತಮಕ ಲಾಸ್ಯಾಂಗವು ತನ್ನ ಆಸುಪಾಸಿನಲ್ಲಿ ಯಾರಿದ್ದಾರೆ ಎಂಬುದನ್ನೂ ಗಮನಿಸದ ನಾಯಕನ(/ನಾಯಕಿಯ) ಪೂರ್ಣವಾಗಿ ಪ್ರೇಮ ಹಂಬಲವಿರುವ ಪ್ರಬಂಧ ಗಾಯನದಿಂದ ಕೂಡಿರುತ್ತದೆಯೆನ್ನುತ್ತಾನೆ. ನಾಟಕಲಕ್ಷಣರತ್ನಕೋಶಕಾರನಾದ ಸಾಗರನಂದಿಯು ಇದನ್ನು ಉತ್ತರೋತ್ತರಕವೆಂಬ ಪರಿಭಾಷೆಯಲ್ಲಿ ಹೇಳಿದ್ದು ಈ ಲಾಸ್ಯಾಂಗವು ಹೇಲಾದಿಂದಲೂ ಲಲಿತಕ್ರೀಡೆಗಳಿಂದಲೂ ಕೂಡಿ ಸುಂದರವಾಗಿದೆಯೆಂದೂ, ಭಾವೋದ್ರಿಕ್ತಳಾದ ಕಾಮೋದ್ರಿಕ್ತಳಾದ ಸರ್ವಾಂಗಭೂಷಿತ ನಾಯಿಕಾಳು ಸಮಯಾಸಮಯದ ಪರಿವೆಯೂ ಇಲ್ಲದೆ ತನ್ನ ಪ್ರಿಯತಮನ ಸಮಾಗಮಕ್ಕಾಗಿ ಹೋಗುತ್ತಾಳೆಂದು ವರ್ಣಿಸಿದ್ದಾನೆ. ಇದಕ್ಕೆ ಉದಾಹರಣೆಯಾಗಿ ಮದಯಂತಿ - ಸಂಹಾರವೆಂಬ ನಾಟಕದ ಅಂಕಗಳನ್ನು ನೀಡಿದ್ದಾನೆ. ವಿಶ್ವನಾಥನು ಈ ಲಾಸ್ಯಾಂಗವು ಕೋಪ, ಖಂಡನೆ ಹಾಗೂ ಅದರ ಉಪಶಮನದಿಂದ ಉಂಟಾಯಿತೆಂದೂ, ಹಾವ ಮತ್ತು ಹೇಲಾಗಳನ್ನು ಹೊಂದಿದ್ದು ಭಾವಭರಿತವಾಗಿದ್ದು ಆಕರ್ಷಕವಾದ ಸುಂದರ ಗಾಯನ ಪ್ರಬಂಧಗಳನ್ನು ಹೊಂದಿದೆಯೆಂದೂ ವರ್ಣಿಸಿದ್ದಾನೆ. ರಾಣಾ ಕುಂಭನು ಸಮೃದ್ಧವಾದ ಅಭಿನಯವನ್ನೂ, ಆಕರ್ಷಕ ಮಾತು ಧಾತುಗಳನ್ನೂ, ಭಾವನೆಗಳನ್ನೂ ಹೊಂದಿದೆಯೆಂದು ವರ್ಣಿಸಿ ಸಂಸ್ಕೃತ ಭಾಷೆಯ ಒಂದು ಶ್ಲೋಕವನ್ನು ಉದಾಹರಣೆಯಾಗಿ ನೀಡುತ್ತಾನೆ. ಶುಭಂಕರನು ಈ ಲಾಸ್ಯಾಂಗವನ್ನು ಉತ್ತರೋತ್ತರಕವೆಂದು ಕರೆದು, ಇದು ನಾಯಕನು ಸಮೀಪದಲ್ಲೇ ಇದ್ದರೂ ಅದರ ಅರಿವಿಲ್ಲದ ನಾಯಿಕೆಯ ವಿರಹವಿಲಾಪ ಸಂಭಾಷಣದ್ದೆಂದು ವರ್ಣಿಸಿದ್ದಾನೆ.

Copyright protected

#.. ನಟ್ಕುಟಕ — ಅರ್ವಾಚೀನ ನಟ್ಕುಟಕ ವೃತ್ತವು ನ ಜ ಭ ಜ ಜ ಲ ಗ ಗಣಗಳನ್ನು ಉಳ್ಳ ಛಂದಸ್ಸು. ಉತ್ಪಲಮಾಲಾ ವೃತ್ತಕ್ಕೆ ಸಮೀಪವಿದೆಯೆಂದು ತೆಲುಗು ಗ್ರಂಥವೊಂದು ಉಲ್ಲೇಖಿಸಿದೆ.

ನರ್ಕುಟಕಕ್ಕೆ ನಟ್ಕುಟಕವೆಂಬ ಎಂಬ ನಾಮಾಂತರವೂ ಇರಬಹುದು. ಯತಿಸ್ಥಾನದ ವ್ಯತ್ಯಾಸದಿಂದ ಇದೇ ವೃತ್ತಕ್ಕೆ ಕೋಕಿಲಕ ಎಂಬ ಹೆಸರೂ ಇದೆ. *ನ ಜ ಭ ಜ ಜ ಲ ಗ* ಒಟ್ಟು ಹದಿನೇಳು ಅಕ್ಷರಗಳು.ಲಘು ಲಘು ಲಘು ಲಘು ಗುರು ಲಘು ಗುರು ಲಘು ಲಘು ಲಘು ಗುರು ಲಘು ಲಘು ಗುರು ಲಘು ಲಘು ಗುರು. 7 ನೇ ಮತ್ತು ನಂತರ 10 ರಲ್ಲಿ ಯತಿ(ನಿಲುಗಡೆ)ಇದ್ದರೆ ನರ್ಕುಟಕ. 7,6,4 ರಲ್ಲಿ ಯತಿ ಇದ್ದರೆ ಕೋಕಿಲಕ. ಲಘು ಲಘು ಲಘು ಲಘು ಗುರು ಲಘು ಗುರು |ಲಘು ಲಘು ಲಘು ಗುರು ಲಘು ಲಘು ಗುರು ಲಘು ಲಘು ಗುರು|| ಹೀಗಿದ್ದರೆ — ಇದು ನರ್ಕುಟಕ. ಲಘು ಲಘು ಲಘು ಲಘು ಗುರು ಲಘು ಗುರು |ಲಘು ಲಘು ಲಘು ಗುರು ಲಘು ಲಘು |ಗುರು ಲಘು ಲಘು ಗುರು|| ಹೀಗಿದ್ದರೆ —ಇದು ಕೋಕಿಲಕವೆಂದಾಗುತ್ತದೆ ಎಂದು ನನ್ನ ಗುರುಗಳಾದ ಕವಿ ಶ್ರೀ ಕೆ. ವಿಶ್ವನಾಥ್ ರವರು ತಿಳಿಸಿಕೊಟ್ಟರು.

ಆದ್ಯ ರಂಗಾಚಾರ್ಯರ ಕನ್ನಡಾನುವಾದದ ನಾಟ್ಯಶಾಸ್ತ್ರದಲ್ಲಿ ಉತ್ತಮೋತ್ತಮಕವೆಂಬ ಲಾಸ್ಯಾಂಗದ ಲಕ್ಷಣವನ್ನು ಹೇಳುವಾಗ ಮೊದಲು ನಟ್ಕುಟಕ ನಂತರ ವಿವಿಧ ಶ್ಲೋಕಗಳನ್ನು ಪ್ರಯೋಗಿಸಬೇಕು ಎಂದು ಹೇಳಿದೆ. ಆದರೆ ಧ್ರುವಾಗಳಿಗೆ ನರ್ಕುಟಕಗಳ ವಿಧಗಳನ್ನು ಹೇಳಿದೆ. ಆದರೆ ಕಾವ್ಯಮಾಲಾ ಪ್ರಕಾಶನದಲ್ಲಿ ಪಂಡಿತ ಕೇದಾರನಾಥರಿಂದ 1943 ರಲ್ಲಿ ಸಂಪಾದನೆಗೊಂಡ ನಾಟ್ಯಶಾಸ್ತ್ರ ಗ್ರಂಥದಲ್ಲಿ ನರ್ಕುಟವೆಂದೇ ಹೇಳಿದೆ.

ನಾಟ್ಯಶಾಸ್ತ್ರದಲ್ಲಿ ನರ್ಕುಟಕದಲ್ಲಿ ಎಂಟು ವೃತ್ತಗಳಿವೆ ಎಂದು ಹೇಳಿ ದೃಷ್ಟಾಂತಗಳ ಸಮೇತ ಲಕ್ಷಣಗಳನ್ನು ಹೇಳಿದೆ. ಈ ಎಂಟು ವೃತ್ತಗಳು ಹೀಗಿವೆ. ಇವು ವಿಶಿಷ್ಟ ತಾಳಗಳಾದ ಶೀರ್ಷಿಕದ ವೃತ್ತಗಳು.

1..ರಥೋದ್ಧತಾ (=ರಥೋತ್ತರಾ) — ಪಾದದ ಹನ್ನೊಂದು ಅಕ್ಷರಗಳಲ್ಲಿ ಮೊದಲನೆಯದು, ಮೂರನೆಯದು, ಏಳನೆಯದು, ಒಂಬತ್ತನೆಯದು ಮತ್ತು ಕೊನೆಯದು ಗುರು.

2..ಬುದ್ಬುದವನ್ನು ಬಡೋದೆಯ (ಅ) ಆವೃತ್ತಿಯಲ್ಲಿ. ಇದಕ್ಕೆ ಸ್ಪಷ್ಟ ದೃಷ್ಟಾಂತವಿಲ್ಲ. ಡಾ. ಮನಮೋಹನ ಘೋಷರ ಆವೃತ್ತಿಯಲ್ಲಿ (ಆ) ಎಂದು ಎರಡು ಬಗೆಗಳನ್ನು ಹೇಳಿದೆ. ಎರಡನೆಯದಕ್ಕೆ ದೃಷ್ಟಾಂತವಿದೆ.

(ಅ) — ಪಾದದ ಒಂಬತ್ತು ಅಕ್ಷರಗಳಲ್ಲಿ ಐದನೆಯದು, ಏಳನೆಯದು ಮತ್ತು ಕೊನೆಯದು ಗುರು.

(ಆ) — ಪಾದದ ಹದಿಮೂರು ಅಕ್ಷರಗಳಲ್ಲಿ ಮೂರನೆಯದು, ಹತ್ತನೆಯದು, ಹನ್ನೊಂದನೆಯದು ಮತ್ತು ಕೊನೆಯದು ಗುರು.

Copyright protected

3..ಉದ್ಗತ — ಪಾದದ ಹದಿನಾರು ಅಕ್ಷರಗಳಲ್ಲಿ ಮೂರನೆಯದು, ಐದನೆಯದು, ಒಂಬತ್ತನೆಯದು, ಹನ್ನೊಂದನೆಯದು, ಹನ್ನೆರಡನೆಯದು, ಹದಿನಾಲ್ಕನೆಯದು ಮತ್ತು ಕೊನೆಯದು ಗುರು.

4..ವಂಶ-ಪತ್ರ-ಪತಿತ — ಪಾದದ ಹದಿನೇಳು ಅಕ್ಷರಗಳಲ್ಲಿ ಮೊದಲನೆಯದು, ನಾಲ್ಕನೆಯದು, ಆರನೆಯದು, ಹತ್ತನೆಯದು ಮತ್ತು ಕೊನೆಯದು ಗುರು.

5..ಪ್ರಮಿತಾಕ್ಷರ — ಪಾದದ ಹನ್ನೆರಡು ಅಕ್ಷರಗಳಲ್ಲಿ ಮೂರನೆಯದು, ಐದನೆಯದು, ಒಂಬತ್ತನೆಯದು ಮತ್ತು ಕೊನೆಯದು ಗುರು.

6..ಹಂಸವತೀ (=ಕೇತುಮತೀ) — ಮೊದಲನೆಯ ಪಾದದಲ್ಲಿ ಹದಿನಾಲ್ಕು, ಮಿಕ್ಕ ಪಾದಗಳಲ್ಲಿ ಹದಿನಾರು ಮಾತ್ರಾಗಳಿರುವುವು.

7..ಧ್ವಜಿನೀ — ಮೊದಲಿನ ಮೂರು (?) ಪಾದಗಳ ಹತ್ತು ಅಕ್ಷರಗಳಲ್ಲಿ ಮೊದಲನೆಯದು, ಮೂರನೆಯದು, ನಾಲ್ಕನೆಯದು, ಐದನೆಯದು, ಕೊನೆಯದು ಗುರು.

8..ಹಂಸಾಸ್ಯ — ಪಾದಗಳ ಹನ್ನೆರಡು ಅಕ್ಷರಗಳಲ್ಲಿ ಮೂರನೆಯದು, ನಾಲ್ಕನೆಯದು, ಆರನೆಯದು, ಏಳನೆಯದು, ಹತ್ತನೆಯದು ಮತ್ತು ಕೊನೆಯದು ಗುರು.

9..ತೋಟಕ — ಪಾದದ ಹನ್ನೆರಡು ಅಕ್ಷರಗಳಲ್ಲಿ ಮೂರನೆಯದು, ಆರನೆಯದು, ಒಂಬತ್ತನೆಯದು ಮತ್ತು ಕೊನೆಯದು ಗುರು.

ಇದೇ ರೀತಿ ಖಂಜಕವೃತ್ತಕ್ಕೂ 22, 9 ಮತ್ತು 8 ಅಕ್ಷರಗಳ ಮೂರು ಬಗೆ ವೃತ್ತಗಳನ್ನು ಹೇಳಿದೆ. ನರ್ಕುಟಕ ಮತ್ತು ಖಂಜಕಗಳ ಬಗೆಗಳಿಂದ ಮೂಲ ಧ್ರುವಾಗಳು. ಇವುಗಳಿಂದ ಸಮ ಮತ್ತು ಬೆಸ ಪಾದಗಳಿಂದ, ಅಕ್ಷರಗಳ ಬೇರೆ ಬೇರೆ ಧ್ರುವಾಗಳು ನಿಷ್ಪನ್ನವಾಗುತ್ತವೆ. ಹೀಗೆ ಪಾದಗಳಲ್ಲಿ ಸಮ - ಬೆಸ ಸಂಖ್ಯೆಯ ಅಕ್ಷರಗಳಿದ್ದ 64 ಧ್ರುವಾಗಳಿವೆ. ಇದರಲ್ಲಿ ಕೆಲವು ವಿಷಮ, ಎಂದರೆ ಎಲ್ಲ ಪಾದಗಳಲ್ಲಿಯೂ ಅಷ್ಟೇ ಅಕ್ಷರಗಳಿರುವುದಿಲ್ಲ ಎಂದು ನಾಟ್ಯಶಾಸ್ತ್ರವು ಹೇಳಿ ಇಂತಿಂತಹ ವೃತ್ತಗಳು ತ್ರ್ಯಶ್ರ ಹಾಗೂ ಇಂತಿಂತಹ ವೃತ್ತಗಳು ಚತುರಶ್ರದಲ್ಲಿರಬೇಕು ಎಂದು ಹೇಳಿ ಇವುಗಳ ಸಮ-ಬೆಸ ಸಂಖ್ಯೆಗಳ ಅಕ್ಷರಗಳಿಂದ ಉಂಟಾಗುವ ಧ್ರುವಾಗಳ ಸಂಖ್ಯೆಗಳನ್ನು ಲೆಕ್ಕ ಮಾಡಿ ಹೇಳಿದೆ. ಖಂಜಕ - ನರ್ಕುಟಕಗಳನ್ನು ನೀಚ ಪಾತ್ರ ಪ್ರವೇಶಕ್ಕಾಗಿ ಬಳಸಬೇಕು. ಖಂಜಕ - ನರ್ಕುಟಕಗಳು ಪ್ರಾಸಾದಕೀ ಧ್ರುವಾ ಆಗಬಲ್ಲವು. ಎಂದರೆ ಸಮಾಧಾನವನ್ನು ತಂದುಕೊಡಬಲ್ಲವು. ಯಾಕೆಂದರೆ, ಇವೆರಡೂ ಲಲಿತವಾದ ಹಾಸ್ಯ ಶೃಂಗಾರ ರಸಗಳಿಗೆ ಸಂಬಂಧಿಸಿದೆ. ನರ್ಕುಟಕ ಧ್ರುವಾವನ್ನು ನೀಚಪಾತ್ರಗಳ ಸಂಬಂಧದ ಎಲ್ಲ ಭಾವಗಳಿಗಾಗಿ ಹಾಡಬೇಕು. ಕೆಲವು ಸಲ ನರ್ಕುಟಕ ಧ್ರುವಾಗಳು ಮಾಗಧೀ (ಪ್ರಾಕೃತ) ಭಾಷೆಯಲ್ಲಿಯೂ ಇರಬಹುದು. ಈ ಧ್ರುವಾಗೆ ಸನ್ನಿಪಾತ, ಶಮ್ಯಾ, ತಾಲ ಮತ್ತು ಆಕಾಶ ಎಂಬ ನಾಲ್ಕು ಗೃಹಗಳಿವೆ.

ನಾಟ್ಯಶಾಸ್ತ್ರದ ಕಾಲಕ್ಕೂ ಅರ್ವಾಚೀನ ಕಾಲಕ್ಕೂ ಛಂದಃಶಾಸ್ತ್ರದಲ್ಲಿಯೂ ಬಹಳ ವ್ಯತ್ಯಾಸಗಳಾಗಿವೆ. ಪ್ರಾಚೀನ - ಅರ್ವಾಚೀನ ಛಂದಸ್ಸಿನ ಹೋಲಿಕೆ - ವ್ಯತ್ಯಾಸಗಳನ್ನು , ಸಮನ್ವಯವನ್ನು ಮಾಡಿ ಈ ಕುರಿತಾಗಿ ಸಂಶೋಧನೆಯನ್ನು ಮಾಡಬೇಕಾದ ಅವಶ್ಯಕತೆ ಬಹಳವಿದೆ.

Copyright protected

#.. ಶೀರ್ಷಕ — ಧ್ರುವಾಗಳು ಆರು ಪ್ರಕಾರದ್ದಿವೆ. ಅವು ಶೀರ್ಷಕ, ಉದ್ವತ, ಅನುಬಂಧ, ವಿಲಂಬಿತ, ಅಡ್ಡಿತ ಮತ್ತು ಅಪಕೃಷ್ಟ. ಶಿರಸ್ಸಿನ ಎಂದರೆ ಉತ್ತಮ ಸ್ಥಾನದಲ್ಲಿರುವುದರಿಂದ ಅದಕ್ಕೆ ಶೀರ್ಷಕವೆಂಬ ಹೆಸರು ಬಂದಿದೆ. ಶೃಂಗಾರರಸಕ್ಕೆ ಸಂಬಂಧಿಸಿದ್ದು ಅದರಲ್ಲಿ ಒಂದು ಉತ್ಕಟವಾದ ವಿಶೇಷವಿದ್ದರೆ ಅದು ಅಡ್ಡಿತವಾಗುತ್ತದೆ. ಶೀರ್ಷಕ ಮತ್ತು ಅಡ್ಡಿತಗಳು ರಾಜರಿಗೆ ಮತ್ತು ದೇವತೆಗಳಿಗೆ ಸಂಬಂಧಿಸಿದ ಧ್ರುವಾ ಪ್ರಕಾರಗಳು. ಶೀರ್ಷಕಗಳಿಗೆ ಪಾದಗಳ ನಿಯಮವಿಲ್ಲ. ಅವುಗಳಲ್ಲಿ ಪ್ರಾರಂಭದಲ್ಲಿ, ಮಧ್ಯದಲ್ಲಿ, ಕೊನೆಯಲ್ಲಿ ಎರಡು ಗುರುಗಳು, ತರುವಾಯ ಒಂದು ಲಘು. ಶೀರ್ಷಕಗಳಿಗೆ ಗಣ ಮಾತ್ರಾ ವಿಭಾಗದ ಬಗ್ಗೆ ನಿಯಮವಿಲ್ಲ. ಬೇರೆ ಬೇರೆ ವೃತ್ತಗಳಲ್ಲಿ ಶೀರ್ಷಕಗಳನ್ನು ಮಾಡಬಹುದು. ಗುರುಗಳಿಂದ ಇಲ್ಲವೆ ಲಘುಗಳಿಂದ ಇಲ್ಲವೆ ಎಲ್ಲ ಲಘುಗಳಿಂದ ಪ್ರಾರಂಭವಾಗಬಹುದು. ಪ್ರತಿಯೊಂದು ಪಾದದಲ್ಲಿ ಇಪ್ಪತ್ತೊಂದಕ್ಕಿಂತ ಕಡಿಮೆ, ಇಪ್ಪತ್ತಾರಕ್ಕಿಂತ ಹೆಚ್ಚು ಅಕ್ಷರಗಳು ಇರಕೂಡದು. ನಾಲ್ಕು ಪಾದಗಳಲ್ಲಿ ಸಮ ಇಲ್ಲವೆ ವಿಷಮ ಸಂಖ್ಯೆಯ ಅಕ್ಷರಗಳನ್ನು ಮಿಶ್ರ ಮಾಡಬಹುದು. ಆದರೆ ನಿಯಮಕ್ಕನುಗುಣವಾಗಿ ಶೀರ್ಷಕದಲ್ಲಿ ಲಘು ಅಕ್ಷರಗಳ ಸಂಚಯ ಇರಬೇಕು. ಪ್ರಾರಂಭದಲ್ಲಿ ಮೂರು ಲಘು, ಕೊನೆಗೆ ಮೂರು ಲಘು, ಮಧ್ಯದಲ್ಲಿ ಎರಡು ಗುರು ಗಣಗಳಿದ್ದಾಗ ಚಪಲಾ ವೃತ್ತವೇ ಶೀರ್ಷಕವೆನ್ನಿಸಿಕೊಳ್ಳುತ್ತದೆ, ಇತ್ಯಾದಿ ಅನೇಕ ವಿವರಗಳು ಶೀರ್ಷಕದ ಬಗ್ಗೆ ನಾಟ್ಯಶಾಸ್ತ್ರದಲ್ಲಿ ಹೇಳಿದೆ. ಜೊತೆಗೆ ಬೇರೆ ಬೇರೆ ಶೀರ್ಷಕಗಳಾದ ಶ್ಯೇನೀ, ಕ್ರೌಂಚ, ಪುಷ್ಪಸಮೃದ್ಧ, ಸಂಭ್ರಾಂತ, ಮತ್ತಾಕ್ರೀಡಿತವಿದ್ಯುನ್ಮಾಲಾ, ಸ್ಖಲಿತ, ವೇಗವತೀ, ಚಪಲಾ ಎಂಬ ಶೀರ್ಷಕಗಳಿಗೆ ಉದಾಹರಣೆಗಳ ಸಮೇತ ಲಕ್ಷಣಗಳನ್ನು ನೀಡಿದೆ.

#.. ಅಪರಾಂತಕ ಶಾಖಾ — ಅಪರಾಂತಕವು ಗೀತದಲ್ಲಿ ಒಂದು ವಿಧ. ಅಪರಾಂತಕ ಶಾಖಾವು ಗೀತದ ಅಂಗ. ಅಪರಾಂತಕದಲ್ಲಿ ಆರು ಪಾದ ಭಾಗಗಳಿರುತ್ತವೆ. ತ್ರ್ಯಸ್ರತಾಲದಿಂದ ಉದ್ಭವಿಸುವ ಪಾತಗಳು ಮತ್ತು ನಾಲ್ಕು ಶಾಖೆಗಳು. ಗುರು ಅಕ್ಷರಗಳನ್ನು ವಿಶ್ಲೇಷಿಸಿ, ಎರಡು ಕಲಾಗಳ ತಾಲವನ್ನು ಆರು ಪಾದಗಳಲ್ಲಿ ವಿನಿಯೋಗಿಸಬೇಕು. ಇದಕ್ಕೆ ಹಾಕಬೇಕಾದ ತಾಲವಿಧಾನವನ್ನು ನಾಟ್ಯಶಾಸ್ತ್ರದ 31ನೆಯ ಅಧ್ಯಾಯದ ಶ್ಲೋ. 274 - 292 ರಲ್ಲಿ ವಿವರಿಸಿದೆ.

#.. ಪಂಚಪಾಣಿ ತಾಲ — ಶಮ್ಯಾ, ತಾಲ ಮತ್ತು ಪ್ರವೇಶಗಳಿಂದ ಹುಟ್ಟುವ ತ್ರ್ಯಶ್ರುತಾಲಕ್ಕೆ (6 ಅಕ್ಷರಗಳು) ಷಟ್ಪಿತಾಪುತ್ರಕ ಇಲ್ಲವೆ ಪಂಚಪಾಣಿ ಎಂದು ಹೆಸರು. ಶಮ್ಯಾ, ತಾಲ ಇತ್ಯಾದಿಗಳು ತಾಲವನ್ನು ಹಾಕುವ ಕ್ರಮಗಳು. ತಾಲ ಎಂಬುದು ಘನ (ಗಟ್ಟಿಯಾದ) ವಾದ್ಯ. ಅದು ಕಾಲ(ಅವಧಿ) ವನ್ನು ಅವಲಂಬಿಸಿದೆ. ಹಾಗೂ ಕಲಾ ಮತ್ತು ಲಯವನ್ನು ಅನುಸರಿಸುತ್ತದೆ. ಇದರಲ್ಲಿ ಶಮ್ಯಾ ಮತ್ತು ತಾಲವು (ತಾಲವೆಂಬ ತಾಲವನ್ನು ಹಾಕುವ ಕ್ರಮವೂ ಬೇರೆಯೇ ಇದೆ) ಸಶಬ್ದದ ಭೇದವಾದರೆ ಪ್ರವೇಶಕವು ನಿಃಶಬ್ದದ ಬೇಧವಾಗಿದೆ. ಷಟ್ಪಿತಾಪುತ್ರಕದಲ್ಲಿಯ ಗುರು - ಲಘುಗಳ ಯೋಜನೆಯು ನಾಟ್ಯಶಾಸ್ತ್ರದ ಕಾಲದಲ್ಲಿ ಹೀಗಿತ್ತು. ಮೊದಲನೆಯದು ಪ್ಲುತ, ಎರಡನೆಯದು ಲಘು, ಮೂರು - ನಾಲ್ಕನೆಯದು ಗುರು, ಐದನೆಯದು ಲಘು ಮತ್ತು ಕೊನೆಯದು ಪ್ಲುತ. ಆರು ಪಾತಗಳೂ ಆರು ಅಕ್ಷರಗಳೂ ಇದ್ದಾಗ ಅದನ್ನೇ ಪಂಚಪಾಣಿ ಎಂದು ಕರೆಯುತ್ತಿದ್ದರು. ಆರು ಪಾತಗಳು (ಪೆಟ್ಟು) ಹೀಗೆ : ಸನ್ನಿಪಾತ,

Copyright protected

ತಾಲ, ಶಮ್ಯಾ, ತಾಲ, ಶಮ್ಯಾ ಮತ್ತು ತಾಲ. ಬಲಗಡೆಯ ಪಾತ ಶಮ್ಯಾ. ಎಡಗೈ ಪಾತ ತಾಳ. ಎರಡುಗಳ ಸಮವಾದ ಪಾತ ಸನ್ನಿಪಾತ. ಪ್ರವೇಶಕದಲ್ಲಿ ಅಧೋಮುಖವಾದ ಅಂಗೈಯನ್ನು ತನ್ನ ಕಡೆ ಮುದುಡಿಕೊಳ್ಳುವುದು, ಚತುಷ್ಕಲಾದಲ್ಲಿ ಪ್ರಯೋಗವಿದ್ದಾಗ ಹೀಗೆ ಮಾಡಬೇಕು.

#.. ಯಥಾಕ್ಷರ — ಅಕ್ಷರಕ್ಕೆ ಅನುಗುಣವಾದ ಪಾತದ ತಾಲವು ಯಥಾಕ್ಷರ ತಾಲ. ಗುರು ಅಕ್ಷರಗಳಿಗಾಗಿ ಅದು ದ್ವಿಕಲವಾಗುವುದು. ಎರಡು ಸಲ ಮಾಡಿದರೆ ಚತುಷ್ಕಲವಾಗುತ್ತದೆ.

#.. ಭಾವ — ಈ ಮೊದಲೇ ಒಮ್ಮೆ ಅರ್ಥ ಹೇಳಿದರೂ ಇಲ್ಲಿ ಸ್ವಲ್ಪ ವಿಸ್ತೃತವಾಗಿ ನೀಡಿದೆ. ಭಾವಶಬ್ದಕ್ಕೆ ನಿರ್ದಿಷ್ಟವೂ ಪ್ರತ್ಯೇಕವೂ ಆದ ಸ್ವಾರ್ಥವಿದೆ. ಭರತನು ಇದನ್ನು (ಉಕ್ತಗ್ರಂಥ, VII, 1-2)'ಯಾವ ಕಾವ್ಯಾರ್ಥವು ವಿಭಾವಗಳಿಂದ ಪ್ರಸ್ತುತಗೊಂಡು, ಅನುಭಾವಗಳಿಂದ ಗೋಚರವಾಗುತ್ತದೋ ಅದೇ ಮಾತು, ಮೈ ಮತ್ತು ಮನಸ್ಸಿನ ಸಾತ್ತ್ವಿಕಾಭಿನಯಗಳೊಡನೆ ಕೂಡಿಕೊಂಡರೆ ಭಾವವೆನ್ನಿಸುತ್ತದೆ. ವಾಚಿಕ, ಆಂಗಿಕ, ಸಾತ್ತ್ವಿಕಾಭಿನಯಗಳ ಮೂಲಕ ಮುಖರಾಗದಿಂದ ಕವಿಯ ಅಂತರಂಗದಲ್ಲಿರುವ ಭಾವವನ್ನು ಸಾಮಾಜಿಕರ ಅನುಭವಕ್ಕೆ ತಂದುಕೊಡುವುದೇ ಭಾವ'ಎಂದು ಭರತಮುನಿಯು ನಿರೂಪಿಸುತ್ತಾನೆ. ಇದಕ್ಕೆ ಪ್ರಸ್ತಾವನೆಯನ್ನು ಬರೆಯುತ್ತ ಭರತಮುನಿಯೇ 'ಇವುಗಳನ್ನು ಭಾವವೆಂದು ಏಕೆ ಕರೆಯುತ್ತಾರೆ? ರತಿ ಶೋಕಾದಿ ಭಾವಗಳು ಪ್ರಕಟಗೊಂಡು ಗೋಚರಿಸುವುದರಿಂದಲೇ (ಭವಂತಿ)? ಮೆಲ್ಲಮೆಲ್ಲಗೆ ಚಿತ್ತವೃತ್ತಿಗಳನ್ನು ಅರಳಿಸಿ ಆಸ್ವಾದಿಸಬೇಕಾದ ಮನಃಸ್ಥಿತಿಯನ್ನುಂಟುಮಾಡುವುದರಿಂದಲೇ? ಹೇಳಲಾಗುವುದು — ಕಾವ್ಯಾರ್ಥಗಳನ್ನು ಮಾತು, ಶರೀರ ಹಾಗೂ ಸಾತ್ತ್ವಿಕ ಭಾವಗಳ ಮೂಲಕ ದೃಶ್ಯಗೊಳಿಸಿ ಪ್ರೇಕ್ಷಕರ ಅನುಭಾವಕ್ಕೆ ತಂದುಕೊಡುವುದೇ ಭಾವ, ಭಾವ ಶಬ್ದವು ಭೂ (ಆಗು) ಧಾತುವಿನ ಕರಣಾರ್ಥದಿಂದ ನಿಷ್ಪತ್ತಿ ಹೊಂದಿದೆ. ಭಾವಿತ, ವಾಸಿತ, ಕೃತ ಎಂಬ ಶಬ್ದಗಳಿಗೆ ಸಮಾನಾರ್ಥವಿದೆ. ಭಾವನೆಗೆ ವ್ಯಾಪನೆ ಎಂಬ ಅರ್ಥವಿದೆ' ಎಂದು ಬರೆಯುತ್ತಾನೆ.

ಭಾವಗಳಲ್ಲಿ ಮೂರು ಪ್ರಕಾರಗಳು - ಸ್ಥಾಯಿ, ಸತ್ವಜ, ಸಂಚಾರೀ. (ಸತ್ವಜಕ್ಕೆ ಸಾತ್ತ್ವಿಕ ಎಂದೂ, ಸಂಚಾರೀಗೆ ವ್ಯಭಿಚಾರೀ ಎಂದೂ ಬೇರೆ ಬೇರೆ ಹೆಸರುಗಳಿವೆ.)

+.. ಸ್ಥಾಯೀ ಭಾವ — ಹೇಗೆ ಅನುಚರರಿಂದ ಪರಿವೃತನಾದ ರಾಜನು ತಾನೊಬ್ಬನೆ ರಾಜನೆನ್ನಿಸುತ್ತಾನೋ, ಹಾಗೆಯೇ ವಿಭಾವ-ಅನುಭಾವ-ವ್ಯಭಿಚಾರಿ ಭಾವಗಳಿಂದ ಪರಿವೃತನಾದ ಸ್ಥಾಯೀಭಾವವು ಒಂದೇ ರಸ ಎಂದೆನ್ನಿಸಿಕೊಳ್ಳುವುದರಿಂದ ಎಲ್ಲ ಭಾವಗಳಿಗೆ ಸ್ಥಾಯೀಭಾವವು ಹಿರಿದಾದುದು.

ಸ್ಥಾಯೀ ಭಾವಗಳು ರತಿ, ಹಾಸ, ಶೋಕ, ಕ್ರೋಧ, ಉತ್ಸಾಹ, ಭಯ, ಜುಗುಪ್ಸಾ ಮತ್ತು ವಿಸ್ಮಯ ಎಂಬ ಈ ಎಂಟು, ಒಂದು ರಸಕ್ಕೆ ಒಂದರಂತೆ.

+.. ಸಂಚಾರೀ ಇಲ್ಲವೆ ವ್ಯಭಿಚಾರಿ — 'ಚರ್' ಎನ್ನುವ ಧಾತುವಿಗೆ ವಿ ಮತ್ತು ಅಭಿ ಎಂಬ ಎರಡು ಉಪಸರ್ಗಗಳಿವೆ. ವಿ- ಎಂದರೆ ವಿವಿಧವಾಗಿ, ಅಭಿ - ಎಂದರೆ ಅಭಿಮುಖರಾಗಿ

copyright protected

ರಸಗಳಲ್ಲಿ ಚರ್ - (ಚರಂತಿ) ಎಂದರೆ ಸುಳಿದಾಡುತ್ತಿವೆ ಎಂದರೆ ಅವನ್ನು ಮುಂದೆ ಒಯ್ಯುತ್ತಿವೆ, ವಿಶಿಷ್ಟ ಸ್ವರೂಪವನ್ನು ಕೊಡುತ್ತಿವೆ ಎಂದು ಅರ್ಥ.

ನಿರ್ವೇದ, ಗ್ಲಾನಿ, ಶಂಕಾ, ಅಸೂಯಾ, ಮದ, ಶ್ರಮ, ಆಲಸ್ಯ, ದೈನ್ಯ, ಚಿಂತಾ, ಮೋಹ, ಸ್ಮೃತಿ, ಧೃತಿ, ಲಜ್ಜಾ, ಚಪಲತಾ, ಹರ್ಷ, ಆವೇಗ, ಜಡತಾ, ಗರ್ವ ವಿಷಾದ, ಔತ್ಸುಕ್ಯ, ನಿದ್ರಾ, ಅಪಸ್ಮಾರ, ಸುಪ್ತ, ಪ್ರಬೋಧ, ಅಮರ್ಷ, ಅವಹಿತ್ಥ, ಉಗ್ರತಾ, ಮತಿ, ವ್ಯಾಧಿ, ಉನ್ಮಾದ, ಮರಣ, ತ್ರಾಸ ಮತ್ತು ವಿತರ್ಕ- ಈ ಮೂವತ್ತಮೂರು ವ್ಯಭಿಚಾರಿ ಭಾವಗಳು.

+.. ಸಾತ್ತ್ವಿಕ ಭಾವ — ಸುಖ - ದುಃಖದಿಂದ ಉಂಟಾದ ಮನಸ್ಸಿನ ಭಾವವೇ ಸತ್ತ್ವ. ರಸ - ಭಾವ ಸಂದರ್ಭದಲ್ಲಿ ಸತ್ತ್ವವು ಸಮಾಧಿಯಲ್ಲಿ (ಏಕಾಗ್ರವಾಗಿ ರಾಶಿಗೊಂಡು) ಇರುವ ಮನಸ್ಸಿನಿಂದ ಹುಟ್ಟುತ್ತದೆ. ಸಾಮಾನ್ಯ ಅಭಿನಯವು ಮಾತು - ಅಂಗ - ಸತ್ತ್ವಗಳಿಂದ ಹುಟ್ಟುತ್ತದೆ. ಅದರಲ್ಲೂ ನಾಟಕದಲ್ಲಿ (ರೂಪಕದಲ್ಲಿ) ಸತ್ತ್ವದ ಬಗ್ಗೆ ಹೆಚ್ಚು ಪ್ರಯತ್ನವನ್ನು ಮಾಡಬೇಕೆನ್ನುತ್ತಾನೆ ಭರತಮುನಿ. ಸತ್ತ್ವದ ಮೇಲೆಯೇ ನಾಟಕವು ನಿಂತಿರುತ್ತದೆ. ಮಾತು- ಅಂಗ-ಸತ್ತ್ವ ಈ ಮೂರರಲ್ಲಿ ಸತ್ತ್ವವು ಪ್ರಬಲವಾದಂತಹ ಅಭಿನಯವು ಜ್ಯೇಷ್ಠತಮವಾಗುತ್ತದೆ. ಸತ್ತ್ವವು ಮಿಕ್ಕವುಗಳಿಗೆ ಸಮಾನವಾದರೆ ಅದು ಮಧ್ಯಮವೆನ್ನಿಸಿಕೊಳ್ಳುವುದು, ಸತ್ತ್ವವೇ ಇಲ್ಲವಾದದ್ದು ಅಧಮವೆನ್ನಿಸಿಕೊಳ್ಳುತ್ತದೆ. ಸತ್ತ್ವವು ಕಣ್ಣಿಗೆ ಕಾಣುವಂತಹುದಲ್ಲ. ಅದು ಭಾವವನ್ನು ಅವಲಂಬಿಸಿರುತ್ತದೆ. ರೋಮಾಂಚ, ಕಣ್ಣೀರು ಮೊದಲಾದುವುಗಳಿಗಾಗಿ ಸತ್ತ್ವವು ರಸವನ್ನು ಒಳಗೊಂಡಿರುತ್ತದೆ.

— ಸ್ತಂಭ, ಸ್ವೇದ, ರೋಮಾಂಚ, ಸ್ವರಭಂಗ, ವೇಪಥು (ನಡುಕು), ವೈವರ್ಣ್ಯ, ಅಶ್ರು, ಪ್ರಲಯ - ಈ ಎಂಟು ಸಾತ್ತ್ವಿಕ ಭಾವಗಳು. (ನಾ. ಶಾ. ಅ. 6. ಶ್ಲೋ. 15 - 22)

#.. ಹಾವ ಮತ್ತು ಹೇಲಾ — ಕಣ್ಣು, ಹುಬ್ಬು ಮೊದಲಾದವುಗಳ ವಿಕಾರವು (ಬದಲಾವಣೆಯು) ಶೃಂಗಾರ ರಸವನ್ನು ಸೂಚಿಸುವುದು. ಅದರಂತೆಯೆ ಕೊರಳಿನ ಚಲನವಲನ. ಸ್ಥಾಯೀ ಭಾವದಲ್ಲಿ ಮೂಡಿದ ಈ ವಿಕಾರಕ್ಕೆ 'ಹಾವ' ಎಂದು ಹೆಸರು. ಅದೇ ಲಲಿತವಾದ ಅಭಿನಯದಿಂದ ಶೃಂಗಾರರಸವನ್ನು ಹುಟ್ಟಿಸಿದರೆ ಅದಕ್ಕೆ 'ಹೇಲಾ' ಎಂದು ಹೆಸರು. ಭಾವದಿಂದ ಹಾವ, ಹಾವದಿಂದ ಹೇಲಾ ಗೋಚರಿಸುವುದು. ಭಾವ - ಹಾವ - ಹೇಲಾ ಇವು ಪರಸ್ಪರವಾಗಿ ಪ್ರೇರಕವಾಗಿವೆ. ನೈಸರ್ಗಿಕವಾಗಿಯೇ ಇವು ದೈಹಿಕವಾಗಿ ಕಾಣುವ ಸತ್ತ್ವಭೇಧಗಳು. (ನಾ. ಶಾ. ಶ್ಲೋ. 1-11)

ಸ್ವಾಭಾವಿಕ ಹಾವಗಳು — ಸ್ತ್ರೀಯರಲ್ಲಿ ಸ್ವಭಾವತಃ ಹತ್ತು ಸ್ವಾಭಾವಿಕ ಹಾವಗಳಿವೆ. ಲೀಲಾ, ವಿಳಾಸ, ವಿಚ್ಛಿತ್ತಿ, ವಿಭ್ರಮ, ಕಿಲಕಿಂಚಿತ. ಮೋಟ್ಟಾಯಿತ, ಕುಟ್ಟಮಿತ, ಬಿಬ್ಬೋಕ, ಲಲಿತ ಮತ್ತು ವಿಹೃತ. ಇವುಗಳ ಲಕ್ಷಣಗಳನ್ನು ಕೆಳಗೆ ನೀಡಿದೆ.

+.. ಲೀಲಾ — ಅವನದೇ ಶಬ್ದಗಳಿಂದ, ಅವನದೇ ಹಾವ-ಭಾವಗಳಿಂದ, ಅವನ ವೇಷದಿಂದ ಪ್ರಣಯಿಯನ್ನು ಅಣಕಿಸುವುದು. ಮಾತುಗಳಿಗೆ ಶ್ಲೇಷಾರ್ಥವಿರುವುದು, ಹಾವ - ಭಾವಗಳು ಲಲಿತವಾಗಿರುವುದು, ಅಣುಕು ಪ್ರೇಮದಿಂದ ಪ್ರೇರಿತವಾಗಿರುವುದು.

Copyright protected

+.. ವಿಲಾಸ — ನಡೆಯುವಾಗ, ಕೂಡುವಾಗ, ನಿಂತಾಗ ಕೈ-ಕಣ್ಣು-ಹುಬ್ಬುಗಳಿಂದ ಏನಾದರೊಂದು ವಿಶೇಷವನ್ನು ಮಾಡುವುದು.

+.. ವಿಚ್ಛಿತ್ತಿ — ಹೂಮಾಲೆಯನ್ನಾಗಲಿ, ವಸ್ತ್ರವನ್ನಾಗಲಿ, ಅಲಂಕಾರಗಳನ್ನಾಗಲಿ, ಗಂಧಗಳನ್ನಾಗಲಿ ಧರಿಸುವಲ್ಲಿ ನಿಷ್ಕಾಳಜಿಯನ್ನು ತೋರಿಸಿದಂತಿದ್ದರೂ ಆಕೆಯ ಲಾಲಿತ್ಯವು ಹೆಚ್ಚುವುದು.

+.. ವಿಭ್ರಮ — ಮದ ಇಲ್ಲವೆ ಪ್ರೇಮ ಇಲ್ಲವೆ ಅತ್ಯಂತ ಹರ್ಷದಲ್ಲಿ ಹಾವ-ಭಾವಗಳಲ್ಲಿ ತಡವರಿಸಿದಂತೆ ಮಾಡುವುದು.

+.. ಕಿಲಕಿಂಚಿತ — ಮುಗುಳ್ನಗೆ, ನಗೆ, ಅಳು, ಭೀತಿ, ದುಃಖ, ಸೊಕ್ಕು, ಶ್ರಮ, ಇಚ್ಛೆ ಇವುಗಳನ್ನು ಹರ್ಷಾತಿರೇಕಕ್ಕಾಗಿ ಕಲಬೆರಕೆ ಮಾಡಿದಂತೆ ಮಾಡುವುದು.

+.. ಮೋಟ್ಟಾಯಿತ — ಪ್ರಣಯಿಯ ಬಗ್ಗೆ ಮಾತನಾಡುವಾಗ, ಆತನನ್ನು ಅಣಕಿಸುವಾಗ, ಒಮ್ಮೆಲೆ ಕಣ್ಣಳಿಂದ. ಮಾತಿಲ್ಲದೆ ಅವನ ಭಾವನೆಯು ತಿಳಿಯಿತು ಎಂದು ಸೂಚಿಸುವುದು.

+.. ಕುಟ್ಟಮಿತ — ಪ್ರಣಯಿಯು ತನ್ನ ತಲೆಗೂದಲಿನ ಮೇಲೆ, ಸ್ತನದ ಮೇಲೆ, ಅಧರದ ಮೇಲೆ ಕೈಯಿಟ್ಟಾಗ ಸುಖವೆನ್ನಿಸಿದರೂ ಇಲ್ಲ ಎಂದು ತೋರಿಸುವುದು.

+.. ಬಿಬ್ಬೋಕ —ಇಷ್ಟಾರ್ಥವು ಲಭಿಸಿದರೂ ಅಹಂಕಾರದಲ್ಲಿ ಸ್ವಾಭಿಮಾನದಲ್ಲಿ ಅನಾದರವನ್ನು ತೋರಿಸುವುದು.

+.. ಲಲಿತ — ಹುಬ್ಬುಗಂಟಿಕ್ಕಿ, ಕೈಕಾಲು, ಕಣ್ಣಳಿಂದ ಲಲಿತ ಹಾವ-ಭಾವಗಳನ್ನು ಮಾಡುವುದು.

+.. ವಿಹೃತ —ಯಾವುದೆ ನೆಪದಿಂದಲಾಗಲಿ, ತನ್ನ ಸ್ವಭಾವವೇ ಅಂತಹುದು ಎಂದಾಗಲಿ ಮಾತನಾಡಿಸಿದರೂ ಹೆಣ್ಣು ಮಾತನಾಡದಿರುವುದು.

#.. ವಿಭಾವ - ಅನುಭಾವ — ಭರತನು 'ವಿಭಾವ' ಎನ್ನುವುದು ಯಾಕೆ? ಎಂದು ಪ್ರಶ್ನಿಸಿ ವಿ-ಭಾವ ಎನ್ನುವುದು ವಿ-ಜ್ಞಾನಕ್ಕಾಗಿ, ಎಂದರೆ ಯಾವುದರ ಜ್ಞಾನದಿಂದ ನಮ್ಮಲ್ಲಿ ಭಾವನೆ ಹುಟ್ಟುತ್ತದೋ, ಅದು. ಆದುದರಿಂದ 'ವಿಭಾವ' ಎಂದರೆ ಕಾರಣ, ಹೇತು ಎಂದು ಅರ್ಥ. ವಾಚಿಕ - ಆಂಗಿಕ - ಸಾತ್ತ್ವಿಕ ಅಭಿನಯಗಳು ಇದರಿಂದಲೇ ಹೊರಡುವುದಾದ್ದರಿಂದ ಇವಕ್ಕೆ ವಿಭಾವ ಎನ್ನುವುದು ಎಂದು ಉತ್ತರಿಸಿ, 'ವಿಭಾವಿತಂ' ಎಂದರೆ 'ವಿಜ್ಞಾತಂ' ಎಂದು ಅರ್ಥ, ವಾಚಿಕ - ಆಂಗಿಕ - ಸಾತ್ತ್ವಿಕ ಅಭಿನಯದಿಂದ ಅನೇಕ ಅರ್ಥಗಳ ಪ್ರತೀತಿಯುಂಟಾಗುತ್ತದಾದ್ದರಿಂದ ಇವನ್ನು ವಿಭಾವ ಎನ್ನುತ್ತಾರೆ ಎಂದು ವಿವರಿಸುತ್ತಾನೆ.

Copyright protected

ವಾಚಿಕ-ಆಂಗಿಕ-ಸಾತ್ತ್ವಿಕವಾಗಿ ಮಾಡಿದ ಅಭಿನಯವು ಇದರಿಂದ 'ಅನು' — ತರುವಾಯ — 'ಭಾವ್ಯತೇ' ತಿಳಿಯಲ್ಪಡುತ್ತದೆ ಎಂಬುದಕ್ಕೆ ಇದನ್ನು 'ಅನುಭಾವ' ಎನ್ನುವುದು. ಎಂದರೆ ವಾಚಿಕ-ಆಂಗಿಕ-ಸಾತ್ತ್ವಿಕ ಅಭಿನಯದಿಂದ ಅವುಗಳ ಮೂಲದಲ್ಲಿದ್ದ ಭಾವನೆಗಳು ಅರಿವಾಗುತ್ತಿದೆ ಎಂಬ ಕಾರಣದಿಂದಾಗಿ ಇವು ಅನುಭಾವಗಳು. (ನಾ. ಶಾ. ಅ. 7. ಶ್ಲೋ.4-5)

(ಭಾವವನ್ನೂ, ಅದರ ಕುರಿತಾದ ಅನೇಕ ಪರಿಭಾಷೆಗಳ ಕುರಿತಾದ ವಿಸ್ತಾರವಾದ ವಿವರಕ್ಕೆ ನಾಟ್ಯಶಾಸ್ತ್ರದಲ್ಲಿ ಆರನೆಯ ಮತ್ತು ಏಳನೆಯ ಅಧ್ಯಾಯಗಳನ್ನು ಆಶ್ರಯಿಸಬೇಕು)

Copyright protected